ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 9 ಸೆಪ್ಟಂಬರ್ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ
ಅನು: ಶ್ಯಾಮಲಾದೇವಿ

ಯಾರಾದರೂ ಪ್ರೀತಿಯನ್ನು ಹೊಂದಿದ್ದು, ಅದನ್ನು ಪ್ರಜ್ಞಾಪೂರ್ವಕವಾಗಿ ಅವರು ಹರಡದಿದ್ದರೂ ಕೂಡ, ಅವರು 'ಬೆಳಕಿನಿಂದ ಕ್ರಾಂತಿ'ಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ನಾನು ಯಾವುದೇ ಹಿಂಜರಿಕೆ ಇಲ್ಲದೆ ಹೇಳುತ್ತೇನೆ. ಪ್ರೀತಿ, ಶಾಂತಿ, ಅನುಕಂಪ..... ಇವೆಲ್ಲ ಬೆಳಕಿನ ಒಂದು ಭಾಗ. ಅಂಥ ಜನರಲ್ಲಿ, ಅವರಿಗೆ ಅರಿವಿಲ್ಲದೆಯೇ, ಇವು ಕಂಪನಗಳಾಗಿ ಹೊರಹೊಮ್ಮುತ್ತಿರುತ್ತವೆ ಮತ್ತು ಈ ಕಂಪನಗಳು ಪ್ರತಿಯೊಬ್ಬರಿಗೂ ತಲುಪುತ್ತವೆ. ಬಹಳ ಸರಳವಾಗಿ ಕಾಣುವ ಈ ತಂತ್ರದ ಹಿಂದೆ, ಸಾವಿರಾರು ವರ್ಷಗಳ ಪ್ರಯೋಗ ಇದೆ. ಋಷಿಗಳು ಮಾನವಕುಲಕ್ಕೆ ಧ್ಯಾನ ಮಾಡುವುದು ಹೇಗೆ ಎಂದು ಕಲಿಸಿದರು. ಅದರ ನಂತರ ಅವರು ನಮಗೆ ಕಾಣಿಕೆಯಾಗಿ ಕೊಟ್ಟಿರುವ ಈ ಲೈಟ್ ಚಾನಲಿಂಗ್ ತಂತ್ರ ಅತ್ಯಂತ ಮೌಲ್ಯವುಳ್ಳ ಮತ್ತು ಮುಖ್ಯವಾದ ತಂತ್ರ.

'ಬೆಳಕಿನಿಂದ ಕ್ರಾಂತಿ'ಯ ಪರಿಣಾಮಗಳನ್ನು ಗಮನಿಸುವುದು ನನ್ನ ಕೆಲಸದ ಒಂದು ಭಾಗ. ಕ್ರಾಂತಿ ಕೆಲಸ ಮಾಡುತ್ತಿದೆ. ಅದು ಬಹಿರಂಗವಾಗಿ ಗೋಚರಿಸದಿರಬಹುದು. ಆದರೆ ಅದು ಅನೇಕ ಜನರ ಅಂತರಾಳವನ್ನು ಸ್ಪರ್ಶಿಸಿದೆ. ಜನರು ಆಯ್ಕೆಮಾಡಲು ಮತ್ತು ಬದಲಾಗಲು ಪ್ರಾರಂಭಿಸಿದ್ದಾರೆ. ಇತರ ರೀತಿಯ ಕ್ರಾಂತಿಗಳು ಅಳಿಯಬಹುದು ಅಥವಾ ಸಂಪೂರ್ಣವಾಗಿ ವಿಕೃತಗೊಳ್ಳಬಹುದು. ಆದರೆ ಆಧ್ಯಾತ್ಮಿಕ ಕ್ರಾಂತಿಗಳು ಹಾಗೆ ಆಗುವುದಿಲ್ಲ. ಅವು ಕೆಲವು ವಿಕೃತಿಗಳನ್ನು ಹೊಂದಿದ್ದರೂ ಸಹ, ಶತಮಾನಗಳವರೆಗೆ ಜೀವಂತವಾಗಿರುತ್ತವೆ. ನಾವು ಅವನ್ನು ಪ್ರಪಂಚದ ಎಲ್ಲ ಧರ್ಮಗಳಲ್ಲಿ ಕಾಣಬಹುದು.

ಆಧ್ಯಾತ್ಮಿಕ ಕ್ರಾಂತಿ ಎಂದಿಗೂ ಅಳಿಯುವುದಿಲ್ಲ. ಅದಕ್ಕಾಗಿಯೇ, ನಾನು ಒಂದು ಕ್ರಾಂತಿಯನ್ನು ರಾಜಕೀಯದೊಂದಿಗೆ ಬೆರೆಸಬಾರದು ಎಂದು ಹೇಳುತ್ತಲೇ ಇದ್ದೇನೆ. ನಾನು ಇದನ್ನು ವಿವರಿಸುತ್ತಿರುವಾಗಲೇ, ಕೆಲವು ಆಂದೋಳನಗಳು ವಿಫಲವಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಒಂದು ಸ್ಪಷ್ಟ ಗುರಿಯ ಕೊರತೆ, ಅಧಿಕಾರದಲ್ಲಿರುವ ಜನರೊಂದಿಗೆ ವೈಯಕ್ತಿಕ ಸಂಬಂಧ ಹೊಂದಿರುವುದು ಮತ್ತು ಅತ್ಯಂತ ಮುಖ್ಯವಾಗಿ ಪರ್ಯಾಯ ವ್ಯವಸ್ಥೆಯನ್ನು ಒದಗಿಸುವುದು, ಆಂದೋಲನವನ್ನು ವಿಫಲಗೊಳಿಸಿದವು.

ಪ್ರಪಂಚದಲ್ಲಿ ಬದಲಾವಣೆಗಳನ್ನು ತರಲು ಬಯಸುವವರೆಲ್ಲರೂ, 2012ರ ಡಿಸೆಂಬರ್ ತಿಂಗಳಲ್ಲಿ ಸಂಭವಿಸಬಹುದಾದ ಮಹತ್ತರ ಬದಲಾವಣೆಗಳ ಬಗ್ಗೆ ತಿಳಿದಿರಬೇಕು ಎನ್ನುವುದು ನನ್ನ ನಂಬಿಕೆ. ಈ ಬದಲಾವಣೆಗಳು ಆಧ್ಯಾತ್ಮಿಕ ಮಟ್ಟದ ಏರಿಕೆಯನ್ನು ಅವಲಂಬಿಸಿವೆ ಎನ್ನುವುದನ್ನು ಅವರು ತಿಳಿದಿರಲೇಬೇಕು. ಇದೆಲ್ಲದರ ಹಿಂದೆ ಕೆಲಸ ಮಾಡುವುದು ಅಧ್ಯಾತ್ಮದ ಅಂಶ. ಈ ಅಂಶಗಳನ್ನು ಜನಸಾಮಾನ್ಯರು ಮತ್ತು ಮುಖಂಡರು ಉಪೇಕ್ಷಿಸಲಾಗುವುದಿಲ್ಲ.

ಒಳ್ಳೆಯತನ, ಪ್ರಾಮಾಣಿಕತೆ ಮತ್ತು ಶಾಂತಿಗಳು ಆಳುವ ಹೊಸ ಕಾಲದ ಚೌಕಟ್ಟನ್ನು ನಾವು ಪ್ರವೇಶಿಸುತ್ತಿದ್ದೇವೆ. ಇವನ್ನು ಪಾಲಿಸದ ಜನರಿಗೆ ಹೊಸ ಯುಗದಲ್ಲಿ ಜೀವನವನ್ನು ಮುಂದುವರಿಸಲಾಗುವುದಿಲ್ಲ. ಪ್ರತಿಯೊಬ್ಬರೂ ಇದನ್ನು ಮನಗಾಣಬೇಕು. ನಾವು ಈ ಕ್ರಾಂತಿಯ ವೇಗವನ್ನು ಹೆಚ್ಚಿಸಬೇಕು.

ನಾವು ಧ್ಯಾನಿಗಳು, ಮುಖ್ಯವಾಗಿ ಅನುಭಾವಿಗಳು. ನಾವು ಅನುಭಾವದ ವಲಯಗಳನ್ನು ಪ್ರವೇಶಿಸಲು ಪ್ರಯತ್ನಿಸುತ್ತೇವೆ ಮತ್ತು ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತೇವೆ. ಸಾಮಾನ್ಯವಾಗಿ ಅನುಭಾವಿಗಳು, ತಾವು ಓದಬೇಕಾಗಿಲ್ಲ ಅಥವಾ ಚಿಂತನೆ ಮಾಡಬೇಕಾಗಿಲ್ಲ ಎಂದು ಭಾವಿಸುತ್ತಾರೆ. ಇದು ಸಂಪೂರ್ಣವಾಗಿ ತಪ್ಪು ಎಂದು ನನ್ನ ಅನಿಸಿಕೆ. ನಾವು ಜ್ಞಾನವನ್ನು ಮೊದಲು ಬುದ್ಧಿಯ ಮಟ್ಟದಲ್ಲಿ ಸಂಗ್ರಹಿಸಿ, ನಂತರ ನಮ್ಮ ಗ್ರಹಿಕೆಯನ್ನು ಮುಂದಿನ ಹಂತವಾದ ಅನುಭಾವದ ಮಟ್ಟದಲ್ಲಿ ಮುಂದುವರಿಸಬೇಕು. ಜ್ಞಾನವನ್ನು ಸಂಗ್ರಹಿಸುವುದಕ್ಕಾಗಿ ಬುದ್ಧಿಯ ಮಟ್ಟ ಅಥವಾ ಅನುಭಾವದ ಮಟ್ಟವನ್ನು ಅವಲಂಬಿಸುವುದು ಸರಿಯಲ್ಲ. ಅನುಭಾವದ ಮಟ್ಟ, ಜ್ಞಾನ ಮತ್ತು ಸತ್ಯದ ಅನ್ವೇಷಣೆಗೆ ಮುಂದಿನ ಮಟ್ಟ ಎನ್ನುವುದನ್ನು ನಾವು ಮನಗಾಣುವುದು ತಂಬಾ ಮುಖ್ಯ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



2012 ಜುಲೈ 31ರಂದು ತಪೋನಗರ ನಿವಾಸಿಗಳ ಕೂಟದಲ್ಲಿ ತಪೋನಗರ ನಿವಾಸಿಗಳು ಗುರೂಜಿಯವರೊಂದಿಗೆ ಅನೌಪಚಾರಿಕವಾಗಿ ಮಾತುಕತೆ ನಡೆಸುತ್ತಿರುವುದು

## ಸುದ್ದಿ-ಸೂಚನೆ

- ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು 25-8-2012ರಂದು ಆನೇಕಲ್‌ನಲ್ಲಿರುವ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ "Light Body & Other Realities" ಪುಸ್ತಕದ ಕನ್ನಡ ಅನುವಾದವನ್ನು ಬಿಡುಗಡೆ ಮಾಡಲಾಯಿತು.
- ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು 26-8-2012ರಂದು ತಪೋನಗರದಲ್ಲಿ ಆಯೋಜಿಸಲಾಗಿತ್ತು. ಆ ಸಂದರ್ಭದಲ್ಲಿ "Pyramid Revelations", "Guruji Speaks (Vol.6)", "iGuruji (Vol.7) ", "Channelled Knowledge from the Rishis (Vol.3)" ಪುಸ್ತಕಗಳನ್ನು ಮತ್ತು "Light Body & Other Realities" ಪುಸ್ತಕದ ಕನ್ನಡ ಅನುವಾದವನ್ನು ಬಿಡುಗಡೆ ಮಾಡಲಾಯಿತು.
- 9-8-2012ರಂದು ತಪೋನಗರದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಜನ್ಮಾಷ್ಟಮಿಯ ವಿಶೇಷ ಧ್ಯಾನದಲ್ಲಿ 100ಕ್ಕೂ ಹೆಚ್ಚು ಸಾಧಕರು ಭಾಗವಹಿಸಿದ್ದರು.

ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ-ಮೇಲ್ ಮುಖಾಂತರ ಸಂಪರ್ಕಿಸಬಹುದು.

## ಈ ತಿಂಗಳು ತಪೋನಗರದಲ್ಲಿ

| | | |
|---|---|---|
| 08 | ಶನಿ | ಕೃಷ್ಣ ಅಷ್ಟಮಿ |
| 14 | ಶುಕ್ರ | ಮಾಸ ಶಿವರಾತ್ರಿ |
| 16 | ಭಾನು | ಅಮಾವಾಸ್ಯೆ |
| 18 | ಮಂಗಳ | ಗೌರಿ ಪೂಜೆ |
| 19 | ಬುಧ | ಗಣೇಶ ಪೂಜೆ |
| 23 | ಭಾನು | ಶುಕ್ಲ ಅಷ್ಟಮಿ |
| 25 | ಮಂಗಳ | ಶುಕ್ಲ ದಶಮಿ |
| 28 | ಶುಕ್ರ | ಅನಂತಪದ್ಮನಾಭ ವ್ರತ |
| 30 | ಭಾನು | ಪೂರ್ಣಿಮಾ |

## ಧ್ಯಾನಕ್ಕೆ ವಿಶೇಷ ದಿನಗಳು

| | |
|---|---|
| ಭಾನುವಾರಗಳು: | ಉಪನ್ಯಾಸಗಳು : ಬೆಳಿಗ್ಗೆ 11-12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 09-09-12 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 16-09-12 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 30-09-12 | ಅಖಂಡ ಧ್ಯಾನ : ಬೆಳಿಗ್ಗೆ 11 - ಮಧ್ಯಾಹ್ನ 1 |

08-09-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

ಸಂ: ಜಯಂತ್ ದೇಶ್‌ಪಾಂಡೆ; ಅನು: ವರ್ಷಾ ದೀಪಕ್

- ಈ ಪ್ರಪಂಚದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುವುದಕ್ಕಾಗಿ, ಪ್ರಾಮಾಣಿಕ ಉದ್ದೇಶದಿಂದ ಬೆಳಕನ್ನು ಹರಡುತ್ತಿರುವುದನ್ನು ಶಾಲಾ ಅಧಿಕಾರಿಗಳು ಗಮನಿಸುತ್ತಿದ್ದಾರೆ ಮತ್ತು ಮೆಚ್ಚುಗೆ ಸೂಚಿಸುತ್ತಿದ್ದಾರೆ. ಅವರ ಈ ಸಕಾರಾತ್ಮಕ ಪ್ರತಿಕ್ರಿಯೆ ಮತ್ತು ಸಹಭಾಗಿತ್ವ, ಬೇರೆ ಭಾಗಗಳಲ್ಲಿನ ಇನ್ನೂ ಹೆಚ್ಚುಹೆಚ್ಚು ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಪರಿಚಯಿಸುವುದಕ್ಕಾಗಿ ಹೆಚ್ಚು ಕೆಲಸ ಮಾಡಲು ನಮ್ಮನ್ನು ಪ್ರೇರೇಪಿಸುತ್ತದೆ.
- ಜುಲೈ ತಿಂಗಳು ಹೆಚ್ಚು ಚಟುವಟಿಕೆಯಿಂದ ಕೂಡಿದ್ದು, 550ಕ್ಕೂ ಹೆಚ್ಚು ಲೈಟ್ ಚಾನಲ್ ಸೆಷನ್‌ಗಳಿಂದ ಕೂಡಿತ್ತು. ಸುಮಾರು 1.5 ಲಕ್ಷಕ್ಕೂ ಹೆಚ್ಚು ಮಕ್ಕಳು ಈ ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ಭಾಗವಹಿಸಿದ್ದಾರೆ. 150 ಹೊಸ ಶಾಲೆಗಳಲ್ಲಿ ಸುಮಾರು 48000 ಮಕ್ಕಳಿಗೆ ಲೈಟ್ ಚಾನಲಿಂಗ್ ಪರಿಚಯಿಸಿದ್ದಾರೆ. ■

## ಲೈಟ್ ಚಾನಲಿಂಗ್ ಕೆಲಸದ ಬಗ್ಗೆ ಪ್ರತಿಕ್ರಿಯೆಗಳು

ನಾವು ನಮ್ಮ ಟ್ರಸ್ಟ್‌ನ ಮುಖಾಂತರ ಕೆಲವು ಕ್ಯಾಂಪ್‌ಗಳನ್ನು ನಡೆಸಿ, ಆರೋಗ್ಯರಕ್ಷಣೆ ಬಗ್ಗೆ ಮಾಹಿತಿ ನೀಡುವುದರ ಮೂಲಕ ಸಮಾಜದಲ್ಲಿ ಹಿಂದುಳಿದ ವರ್ಗದವರನ್ನು ಸ್ವಾವಲಂಬಿ ವ್ಯಕ್ತಿಗಳನ್ನಾಗಿಸಲು, ನಮ್ಮದೇ ಆದ ಸಣ್ಣಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದೇವೆ. ಆದರೆ ಮಾನಸ ಫೌಂಡೇಶನ್ ಒಂದು ಸಮಾಜವನ್ನು ಕಟ್ಟುತ್ತಿದೆ. ಬೆಳಕು ಹರಡುವುದರಿಂದ, ವ್ಯಕ್ತಿಗಳು ತಾವು ಸಕಾರಾತ್ಮಕವಾಗಿ ಬದಲಾವಣೆಗೊಂಡು ಒಂದು ಉತ್ತಮ ಸಮಾಜವನ್ನು ನಿರ್ಮಿಸಲು ಸಹಾಯ ಮಾಡುತ್ತದೆ. ಇದು ಒಂದು ಅದ್ಭುತ ಕಾರ್ಯಕ್ರಮವಾಗಿದೆ. ಈ ಸ್ವಪ್ರೇರಿತ ಕೆಲಸದಿಂದ ನಿಮಗೆ ಏನು ಪ್ರಯೋಜನವಾಗುವುದೆಂದು ಇತರರಿಗೆ ಅನಿಸಬಹುದು. ಇದರಿಂದ ನಿಮಗೆ ಹೆಚ್ಚು ತೃಪ್ತಿ ಸಿಗುತ್ತದೆ ಎಂದು ನನಗನಿಸುತ್ತದೆ. ನೀವು ಈ ಉತ್ತಮ ಕೆಲಸವನ್ನು ಮುಂದುವರೆಸಿಕೊಂಡು ಹೋಗಬೇಕು ಮತ್ತು ಇನ್ನೂ ಅನೇಕರು ಇದರಲ್ಲಿ ಭಾಗವಹಿಸಲಿ ಎಂದು ನಾನು ಹಾರೈಸುತ್ತೇನೆ.

– ಅಸ್ಲಾಂ, ಆಡಳಿತಾಧಿಕಾರಿ, ವಿ–ಕೇರ್ ಪ್ರಾಥಮಿಕ ಶಾಲೆ, ಕನಕನಗರ, ಬೆಂಗಳೂರು

ನಮ್ಮ ಮಕ್ಕಳ ನಡವಳಿಕೆಯಲ್ಲಿ ಹೆಚ್ಚಿನ ಪ್ರಗತಿ ಕಂಡುಬರುತ್ತಿದೆ. ಇನ್ನು ಮುಂದೆಯೂ ಇದೇ ರೀತಿಯ ಬೆಂಬಲವನ್ನು ನಾವು ಬಯಸುತ್ತೇವೆ. ನಿಮ್ಮ ಬಿಡುವಿಲ್ಲದ ಕಾರ್ಯಕ್ರಮದಲ್ಲಿ ನಮಗಾಗಿ ಸಮಯ ಮಾಡಿಕೊಂಡಿದ್ದಕ್ಕಾಗಿ ಧನ್ಯವಾದಗಳು.

– ಸ್ಪೆಶಲ್ ನೀಡ್ಸ್, ಯಲಹಂಕ ಉಪನಗರ, ಬೆಂಗಳೂರು

ನಾವೆಲ್ಲರೂ ಶಾಂತಿ ಮತ್ತು ಪ್ರೀತಿಯಿಂದ ತುಂಬಿರುವ ಒಂದು ಪ್ರಪಂಚವನ್ನು ಸೃಷ್ಟಿಸಲು ಏನನ್ನೋ ಹುಡುಕುತ್ತಿದ್ದೆವು. ಇದಕ್ಕೆ ಲೈಟ್ ಚಾನಲಿಂಗ್ ಒಂದು ಪರಿಪೂರ್ಣವಾದ ತಂತ್ರ. ಇದು ನನ್ನ ಹೃದಯಕ್ಕೆ ಹತ್ತಿರವಾಗಿರುವ ವಿಷಯವಾಗಿದೆ. ಮಾನಸ ಫೌಂಡೇಶನ್‌ನ ಕಾರ್ಯಕರ್ತರು ವಾಸ್ಕೋ–ಡ–ಗಾಮಾನಂತೆ ಶಾಲೆಗಳನ್ನು ಹುಡುಕುತ್ತಾ, ನೇರವಾಗಿ ಜನರ ಹೃದಯಗಳನ್ನು ತಲುಪುತ್ತಾರೆ!

– ಶ್ರೀಮತಿ ಸೀರಾಜ್ ಉನ್ನೀಸಾ, ಮುಖ್ಯೋಪಾಧ್ಯಾಯಿನಿ,
ಬೀಬೀ ಫಾತಿಮಾ ಪಬ್ಲಿಕ್ ಶಾಲೆ, ಇಲಿಯಾಸ್ ನಗರ, ಬೆಂಗಳೂರು

## ತಪೋನಗರ ಡೈರಿ

ಸೀಮಾ ಅಲ್‌ಮೇಲ್ ಸೋಮಾಯಾಜಿ; ಅನು: ಪಾಂಡುರಂಗ

ಗುರುಪೂರ್ಣಿಮೆಯಂದು, ಒಬ್ಬ ಸಾಧಕ ತನ್ನ ಗುರುವನ್ನು ಸಂಧಿಸಿ, ಗುರುವಿನ ಕೃಪೆ ಪಡೆಯಲು ಸಾಧ್ಯವಾಗಿರುವ ಈ ನಾಡು ಧನ್ಯ. ಗುರು–ತತ್ವ ಭೌತಿಕವಾಗಿ ಅಭಿವ್ಯಕ್ತವಾಗಿರುವ ತಪೋನಗರ ಅಂಥ ಒಂದು ಪವಿತ್ರ ಸ್ಥಳ. ಗುರುಪೂರ್ಣಿಮೆಯ ವಿಶೇಷ ಧ್ಯಾನದ ನಂತರ ಗುರೂಜಿಯವರಿಂದ ಸಾಧಕರು ವೈಯಕ್ತಿಕವಾಗಿ ಆಶೀರ್ವಾದ ಪಡೆಯುತ್ತಿರುವಾಗ, ಭಾವನಾತ್ಮಕವಾಗಿ ಚೈತನ್ಯಗೊಂಡಿದ್ದ ಆ ವಾತಾವರಣ ಸ್ಪರ್ಶವೇದ್ಯವಾಗಿತ್ತು.

ಆಷಾಢಮಾಸದ ಮುಕ್ತಾಯ, ದೈವೀ ಅಂಶಗಳು ಈ ಭೂಮಿಗೆ ಬಂದು ಹತ್ತು ದಿನಗಳವರೆಗೆ ಇರುವ ಪವಿತ್ರವಾದ ಸಮಯದ ಆರಂಭದ ಮುನ್ಸೂಚನೆಯಾಗಿದೆ. ಅವರ ಸ್ವಾಗತಕ್ಕಾಗಿ ತಪೋನಗರವನ್ನು ಸಜ್ಜುಗೊಳಿಸುತ್ತಿದ್ದೇವೆಯೋ ಎಂಬಂತೆ, ಒಂದು ಶನಿವಾರ ಬೆಳಿಗ್ಗೆ ತಪೋನಗರ ನಿವಾಸಿಗಳೆಲ್ಲಾ ಸೇರಿ ಎಲ್ಲೆಂದರಲ್ಲಿ ಹರಡಿದ್ದ ತ್ಯಾಜ್ಯವಸ್ತುಗಳು ಮತ್ತು ಪ್ಲಾಸ್ಟಿಕ್‌ಗಳನ್ನು ಸ್ವಚ್ಛಗೊಳಿಸಿದರು. ತಪೋನಗರ ನಿವಾಸಿಗಳ ವಿಶಿಷ್ಟ ಲಕ್ಷಣದಂತೆ, ಅವರಿಗೆ ಈ ಸಂದರ್ಭವೂ ಬೇರೆಲ್ಲದರಂತೆ ಕೆಲಸಕ್ಕಿಂತ ಹೆಚ್ಚಾಗಿ ವಿನೋದವಾಗಿತ್ತು. ನಗು–ನಲಿವುಗಳಲ್ಲಿ ಮುಳುಗಿದ್ದ ಅವರಿಗೆ, ಹುಬ್ಬುಗಳ ಮೇಲೆ ಬೆವರು ಹನಿಗೂಡಿರುವುದರತ್ತ ಕೂಡಾ ಗಮನವಿರಲಿಲ್ಲ. ನಗುಮುಖಗಳು ಮತ್ತು ಗ್ಲೌಸ್ ಹಾಕಿಕೊಂಡ ಕೈಗಳು ಚಿಂದಿ ಆಯುವುದರೊಂದಿಗಿನ ಸಂಬಂಧ ದಾರಿಹೋಕರಿಗೆ ಅರ್ಥವಾಗುತ್ತಿರಲಿಲ್ಲ!

ಜುಲೈ ತಿಂಗಳ ನಾಲ್ಕನೇ ವಾರದಲ್ಲಿ ಮಹಾಲಕ್ಷ್ಮಿಯ ಚೈತನ್ಯಗಳನ್ನು ಪಡೆದುಕೊಂಡೆವು.

ಕೆಲಸಗಾರರ ಕೊರತೆಯ ಬಿಸಿ ಈ ಗ್ರಾಮಾಂತರ ಪ್ರದೇಶಕ್ಕೂ ತಟ್ಟಿದೆ. ಆದರೂ ತಪೋನಗರ ನಿವಾಸಿಗಳ ಕೂಟದ ನಂತರ ಗುಡಿಸುವುದು ಮತ್ತು ಒರೆಸುವಂಥ ಸ್ವಚ್ಛತಾ ಕೆಲಸಗಳಿಗಾಗಿ ಕೆಲಸಗಾರರನ್ನು ಅವಲಂಬಿಸಬೇಕಾಗಿಲ್ಲ. ತಪೋನಗರದವರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಾಗಿ ನಿಶ್ಚಯಿಸಿದ್ದಾರೆ. ಈ ಕೆಲಸಗಳಲ್ಲೂ ಉತ್ಸಾಹ ತೋರುವ ತಪೋನಗರ ನಿವಾಸಿಗಳ ಸಂಭ್ರಮದಿಂದಾಗಿ ಇದು ಕೂಡಾ ಇನ್ನೊಂದು ಪಾರ್ಟಿಯಂತೆ ಅನಿಸುತ್ತದೆ. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

# ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

01–07–2012

ನಾವು ಬೆಳಕನ್ನು ಚಾನಲ್ ಮಾಡಿದಾಗ ಚೈತನ್ಯಗಳನ್ನು ಪಡೆಯುತ್ತೇವೆ ಮತ್ತು ಸಂಗ್ರಹಿಸುತ್ತೇವೆ. ಈ ಚೈತನ್ಯಗಳ ಅರಿವು ಮತ್ತು ಅನುಭವ ನಮಗೆ ಆಗಬೇಕು. ಈ ಪ್ರಕ್ರಿಯೆ ಪೂರ್ಣವಾಗಬೇಕಾದರೆ ಚೈತನ್ಯಗಳನ್ನು ಬಳಸಿಕೊಂಡು ಶಾಂತಿ, ಪ್ರೀತಿಗಳನ್ನು ಅಭಿವ್ಯಕ್ತಿಸಬೇಕು. ಇದರಿಂದ ಕೆಲವು ನಿರ್ದಿಷ್ಟ ಕರ್ಮಗಳು ಕಳೆಯುತ್ತವೆ, ವಿಶೇಷವಾಗಿ ಗುರುಪೂರ್ಣಿಮೆಯ ದಿನ ಪ್ರಮುಖ ಕರ್ಮಗಳು ಕಳೆಯುತ್ತವೆ.

ಮೇ ತಿಂಗಳಲ್ಲಿ ಎರಡು ಗ್ರಹಣಗಳಿದ್ದವು ಮತ್ತು ನವೆಂಬರ್ ತಿಂಗಳಲ್ಲಿ ಎರಡು ಗ್ರಹಣಗಳು ಇವೆ. ಇವೆರಡರ ಮಧ್ಯದ ಕಾಲಾವಧಿ ಬಹಳ ಮುಖ್ಯ. ವೈಯಕ್ತಿಕ ಮತ್ತು ಎಲ್ಲ ಹಂತಗಳಲ್ಲಿ ಹಠಾತ್ತಾಗಿ ಗೊಂದಲದ ಸನ್ನಿವೇಶಗಳಿಂದ ಕೂಡಿರುವ ಈ ಅವಧಿ ಪ್ರಕ್ಷುಬ್ಧವಾದುದು. ಇದರಿಂದ ಯಾರೂ ತಪ್ಪಿಸಿಕೊಳ್ಳಲಾಗುವುದಿಲ್ಲ ಏಕೆಂದರೆ ಇದು ಪ್ರಳಯದ ಒಂದು ಭಾಗ. ಇದನ್ನು ಎದುರಿಸಲು ನಮ್ಮನ್ನು ನಾವು ಆಧ್ಯಾತ್ಮೀಕರಿಸಿ–ಕೊಳ್ಳುವುದರಿಂದ ಸಿದ್ಧಪಡಿಸಿಕೊಳ್ಳಬೇಕು. ಒಂದು ಸಣ್ಣ ಏರುಪೇರು ತೀವ್ರ ಜಟಿಲ ಸನ್ನಿವೇಶಗಳಿಗೆ ಎಡೆ ಮಾಡಿಕೊಡಬಹುದು. ಯಾವುದೇ ನಕಾರಾತ್ಮಕ ಬೆಳವಣಿಗೆಗಳ ಬಗ್ಗೆ ಮತ್ತು ನಮ್ಮ ಮೇಲೆರಗುವ ಯಾವುದೇ ನಕಾರಾತ್ಮಕತೆ ಬಗ್ಗೆ ಯಾವಾಗಲೂ ಎಚ್ಚರದಿಂದ ಇರಬೇಕು. ನಾವು ಪಡೆದ ವಿಶೇಷ ಚೈತನ್ಯಗಳು ಮತ್ತು ಇಷ್ಟೊಂದು ಜ್ಞಾನಗಳು ದೇವರ ಕೃಪೆ ಎಂಬ ಅರಿವಿರಬೇಕು. ಈ ಚೈತನ್ಯಗಳು ಯಾವ ಸನ್ನಿವೇಶವನ್ನಾದರೂ ಎದುರಿಸಲು ನಮಗೆ ಸಹಾಯ ಮಾಡುತ್ತವೆ. ‘ನಾನು ಇಂಥ ಸನ್ನಿವೇಶದಲ್ಲೇಕೆ ಇದ್ದೇನೆ?’ ಎಂದು ನಾವು ಯೋಚಿಸಬೇಕು ಮತ್ತು ಅನೇಕ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕು. ಸೂಕ್ತವಾದುದನ್ನು ಆಯ್ಕೆ ಮಾಡಿಕೊಂಡು ಅದರಂತೆ ನಡೆದುಕೊಳ್ಳಿ. ನಾವು ಉನ್ನತ ವಾಸ್ತವೀಯತೆಗಳನ್ನು ಅರಿಯಬೇಕು. ಇವೆಲ್ಲ ಸಮಸ್ಯೆಗಳಲ್ಲ, ಆದರೆ ನಾವು ಎದುರಿಸಬೇಕಾಗಿರುವ 2012ರ ಕೊನೆಯ ಘಟನೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಕೆಲವು ವಾಸ್ತವೀಯತೆಗಳನ್ನು ಮನಗಾಣಲು ಇವು ಒಳ್ಳೆಯ ಅವಕಾಶಗಳು. ನಿಮಗೆ ಧ್ಯಾನ ಮಾಡಲು ಕಷ್ಟವಾದಾಗ, ಜಾಗರೂಕರಾಗಿ. ಧ್ಯಾನವನ್ನು ತಪ್ಪಿಸಬೇಡಿ. ಋಷಿಗಳ ಸಹಾಯವನ್ನು ಪಡೆಯಿರಿ. ಅವರು ಸಹಾಯಮಾಡಲು ಸದಾ ಸಿದ್ಧ.

‘ಆತ್ಮದ ಅವರೋಹಣ’ ಪುಸ್ತಕವನ್ನು ಮತ್ತೆಮತ್ತೆ ಓದಿ. ಈ ಸೃಷ್ಟಿಯ ಕಾರಣ, ಪ್ರಕ್ರಿಯೆ, ಜನ್ಮ ತಳೆಯುವುದರ ಉದ್ದೇಶ ತಿಳಿಯುವಿರಿ. ಅಮರರವರು ಇದು ಭಗವದ್ಗೀತೆಯಂಥ ಪುಸ್ತಕ ಎಂದಿದ್ದಾರೆ. ನಿಮಗೆ ಸಮಸ್ಯೆ ಎದುರಾದಾಗ ಈ ಪುಸ್ತಕವನ್ನೊಮ್ಮೆ ಓದಿ. ಅದು ಅದ್ಭುತವಾದ ಚೈತನ್ಯಗಳನ್ನು ಹೊಂದಿದ್ದು ನಿಮಗೆ ಸಹಾಯ ಮಾಡುತ್ತದೆ, ಮಾರ್ಗದರ್ಶಿಸುತ್ತದೆ.

ಸಾವಿನ ನಂತರ ನಾವು ದೇಹವನ್ನು ತೊರೆದಾಗ, ಇದ್ದಕಿದ್ದಂತೆ ಜ್ಞಾನ ಪಡೆಯುತ್ತೇವೆ ಮತ್ತು ಭವಿಷ್ಯವನ್ನು ಕಾಣುತ್ತೇವೆ. ಇಂಥ ಒಂದು ಪ್ರೇತಾತ್ಮ ಒಬ್ಬ ವ್ಯಕ್ತಿಯ ದೇಹವನ್ನು ಆಕ್ರಮಿಸಿ, ತಾನು ಇಂಥ ದೈವವೆಂದು ಹೇಳಬಹುದು ಮತ್ತು ಅದರ ಬಳಿಗೆ ಹೋದ ಜನರಿಗೆ ಸಾಮಾನ್ಯವಾಗಿ ಉಪದೇಶಿಸಲು ಪ್ರಾರಂಭಿಸುತ್ತದೆ. ಅವುಗಳನ್ನು ನಾವು ದೇವರು ಎಂದು ತಪ್ಪು ತಿಳಿಯಬಾರದು. ಅವು ನಮ್ಮ ಲೌಕಿಕ ಜೀವನದಲ್ಲಿ ಸ್ವಲ್ಪ ಮಟ್ಟಿಗೆ ಮಾರ್ಗದರ್ಶಿಸಬಹುದು, ಆದರೆ ಎಂದಿಗೂ ಆಧ್ಯಾತ್ಮಿಕತೆಯ ಕೋನದಿಂದ ಮಾರ್ಗದರ್ಶಿಸಲಾಗುವುದಿಲ್ಲ. ಋಷಿಗಳು ಮತ್ತು ದೇವರುಗಳು ಮಾತ್ರ ಮಾರ್ಗದರ್ಶಿಸಬಲ್ಲರು. ನಮಗೆ ನಾವೇ ಮಾರ್ಗದರ್ಶಿಸಿಕೊಳ್ಳಬಹುದು. ನಾವು ಧ್ಯಾನದಿಂದ ಪ್ರಾರಂಭಿಸಿ ನಂತರ ಉನ್ನತ ಜ್ಞಾನ ಮತ್ತು ಚೈತನ್ಯಗಳನ್ನು ಪಡೆಯಲು ಅರ್ಹತೆಗಳಿಸುತ್ತೇವೆ. ನಮಗೆ ಆತ್ಮವಿಶ್ವಾಸ ಬರುವವರೆಗೂ ಒಬ್ಬ ಮಾನವ ಗುರುವಿನ ಬಳಿಗೆ ಹೋಗುತ್ತೇವೆ. ನಂತರ ನಾವೇ ನಮ್ಮ ಗುರುಗಳು.

ನೀವು ನನ್ನೊಡನೆ ಸಂಬಂಧ ಬಯಸಿದರೆ ಧ್ಯಾನ ಮಾಡಿ, ಶಂಬಲ ನಿಯಮಗಳನ್ನು ಅಭ್ಯಸಿಸಿ, ಪ್ರೀತಿ ತೋರಿಸಿ, ಒಳ್ಳೆಯವರಾಗಿ. ನಾವು ಪ್ರಜ್ಞಾಸಾಗರದಲ್ಲಿ ಭೇಟಿ ಮಾಡೋಣ ಮತ್ತು ಈ ಸಂಬಂಧವನ್ನು ಶಾಶ್ವತವಾಗಿಡೋಣ. ಅತ್ಯಂತ ಹತ್ತಿರದ ಆಧ್ಯಾತ್ಮಿಕ ಸಂಬಂಧಗಳಿರುವುದು ಗುರು ಮತ್ತು ದೇವರೊಂದಿಗೆ.

08–07–2012

ನಾನು ತರಗತಿಗಳಲ್ಲಿ ಮಾತನಾಡುವುದೆಲ್ಲ ಋಷಿಗಳಿಂದ ಬಂದುದಾಗಿದೆ. ನಮ್ಮನ್ನು ಅರ್ಥಮಾಡಿಕೊಳ್ಳಿ. ಸಾಧ್ಯವಾದಷ್ಟು ಅನುಸರಿಸಿ. ದೈವಿಕತೆಯನ್ನು ಅಭಿವ್ಯಕ್ತಿಸುವುದು ಮುಖ್ಯವೇ ಹೊರತು ತಂತ್ರಗಳಲ್ಲ. ಆತ್ಮದ ಮಟ್ಟದಲ್ಲಿ ಪ್ರತಿಯೊಬ್ಬರೊಂದಿಗೆ ಸಂಪರ್ಕಹೊಂದಲು ಸಾಧ್ಯವಾದರೆ ನೀವು ಮತ್ತು ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರೆಲ್ಲರೂ ಹಸನ್ಮುಖಿಗಳಾಗಿರುವಿರಿ. ನಮ್ಮಲ್ಲಿ ಪ್ರತಿಯೊಬ್ಬರೂ ಶಾಂತಿ, ಸಂತೋಷಗಳಿಂದ ಇರುವುದು ಮುಖ್ಯ, ಕಾರಣ ಅವು ಸಮಾಜದ ಮೇಲೆ, ವಿಶ್ವಶಾಂತಿಯ ಮೇಲೆ ಪ್ರಭಾವ ಬೀರುತ್ತದೆ.

ಕ್ರಾಂತಿ ಅಥವಾ ಬದಲಾವಣೆ ಆಗುತ್ತಿದೆ. ಪ್ರತಿಯೊಬ್ಬರೂ ಬೆಳಕನ್ನು ಚಾನಲ್ ಮಾಡದಿರಬಹುದು ಆದರೆ ಅವರಿಗೆ ಮತ್ತು ನಮಗೆ ತಿಳಿಯದ ಏನೋ ಒಂದು ಸಂಭವಿಸುತ್ತಿದೆ. ಕೆಲವು ಸಲ ಬದಲಾವಣೆಗಳು ಶೀಘ್ರ ಮತ್ತು ಸಂಪೂರ್ಣವಾಗಿರುತ್ತವೆ ಮತ್ತು ಕೆಲವು ಸಲ ಬದಲಾವಣೆಗಳೇ ಇರುವುದಿಲ್ಲ, ಆದರೆ ಬದಲಾವಣೆಗಳು ನಿಧಾನ ಮತ್ತು ಭಾಗಶಃವಾಗಿ ಆದರೂ, ಅದು ಕ್ರಾಂತಿಯೇ.

ನಾನು ಪ್ರತಿಯೊಬ್ಬರಲ್ಲಿ ಮತ್ತು ನನ್ನಲ್ಲಿ ಕೂಡಾ ಬದಲಾವಣೆಗಳನ್ನು ನಿರೀಕ್ಷಿಸುತ್ತೇನೆ. ಬದಲಾವಣೆಗಳಿವೆ ಆದರೆ ಅವು ಸಾಲದು. ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು. ವ್ಯಕ್ತಿಗಳು ಬದಲಾವಣೆಯಾದರೆ ವ್ಯವಸ್ಥೆಗಳು ಬದಲಾಗುತ್ತವೆ. ವ್ಯವಸ್ಥೆಗಳು ಇದ್ದಕ್ಕಿದ್ದಂತೆ ಕುಸಿದರೆ ಗೊಂದಲ ಉಂಟಾಗುತ್ತದೆ. ಆಧ್ಯಾತ್ಮಿಕ ಕ್ರಾಂತಿಗಳು, ಯಾವುದೇ ಘರ್ಷಣೆ ಅಥವಾ ಪ್ರಚೋದನೆಗಳಿರದೆ ಯಾವಾಗಲೂ ಅಹಿಂಸಾತ್ಮಕವಾಗಿ ಮತ್ತು ಮೌನವಾಗಿ ಆಗುತ್ತವೆ. ಅಲ್ಲಿ ಕೇವಲ ಪ್ರೀತಿ ಮತ್ತು ಭರವಸೆಗಳಿರುತ್ತವೆ. ಇವು ಸಂಭವಿಸುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಅತ್ಯುತ್ತಮ ಉದಾಹರಣೆ ಎಂದರೆ ಬೆಳಕಿನ ಚಾನಲಿಂಗ್, ಅದರಲ್ಲಿ ವಾಣಿಜ್ಯ ಉದ್ದೇಶವಿಲ್ಲ, ಪರಿಶುದ್ಧ ಪ್ರೇಮ ಮಾತ್ರ ಇದೆ.

ಉತ್ತಮ ವಿಧಾನಗಳು ಮತ್ತು ಉನ್ನತ ಆಚರಣೆಗಳು ಇವೆ ಎಂದು ಮನಗಂಡಾಗ ನಾವು ಅವುಗಳನ್ನು ಅನುಸರಿಸುತ್ತೇವೆ. ಅನೇಕ ಜನ ತಮ್ಮ ಆತ್ಮಸಾಕ್ಷಿಯಿಂದ ಧ್ಯಾನ ಅತ್ಯುನ್ನತ ಆರಾಧನೆ ಎಂದು ತಿಳಿದಿದ್ದಾರೆ. ತಮ್ಮ ಕುಟುಂಬದವರನ್ನು ಬೇಸರಿಸಬಾರದೆಂದು ಪೂಜೆಗಳನ್ನು ಮಾಡುತ್ತಾರೆ. ಘರ್ಷಣೆಯಿಲ್ಲದ ದಾರಿ ಇದು. ಬೆಳಕನ್ನು ಹೊಂದಿರಿ, ಬೆಳಕನ್ನು ಅನುಭವಿಸಿ, ನಿಮ್ಮೊಳಗೆ ಕ್ರಾಂತಿ ಉಂಟಾಗುತ್ತದೆ. ಇದು ತೀವ್ರವಾದ ಪ್ರಕ್ಷುಬ್ಧತೆಯ, ಮಂಥನದ ಮತ್ತು ಅನೇಕ ಸವಾಲುಗಳ ಅತ್ಯಂತ ಮುಖ್ಯವಾದ ಕಾಲಾವಧಿ. ನೀವು ನಿಮ್ಮ ಆಧ್ಯಾತ್ಮದ ಗುರಿಯ ಮೇಲೆ ಗಮನವನ್ನು ಕೇಂದ್ರೀಕರಿಸಿ.

ನಾವು ಕೇವಲ ಆಚರಣೆಗಳಿಂದ ದೂರ ಹೋದರೆ ಸಾಲದು, ನಮ್ಮ ಸ್ವಂತ ಅರ್ಥವಂತಿಕೆಗಳಿಂದ ಮತ್ತು ನಮ್ಮ ಸ್ವಂತ ನಿಯಮಗಳಿಂದ ದೂರ ಹೋದಾಗಲೇ ಕ್ರಾಂತಿ ಸಂಭವಿಸುತ್ತದೆ. ಇದು ಎಂದಿಗೂ ಮುಗಿಯದ ಕ್ರಾಂತಿಯಾದುದರಿಂದ, ನೀವು ನಿರಂತರವಾಗಿ ಚಲಿಸಬೇಕು. ಆದ್ದರಿಂದ ‘ಎಲ್ಲವನ್ನೂ ದಾಟಿ ಹೋಗು’ ಎಂಬುದೇ ಈಗಿನ ಮಂತ್ರ, ಕೀಲಿಕೈ. ಧ್ಯಾನವೇ ಕ್ರಾಂತಿಯ ಒಂದು ಭಾಗ. ನಮ್ಮ ಜೀವನಗಳನ್ನು ಬದಲಿಸುವ ಮತ್ತು ಬಹಳ ಶಾಂತಿಯುತ ಹಾಗೂ ಪ್ರೀತಿಯ ವ್ಯಕ್ತಿಗಳನ್ನಾಗಿ ಮಾಡುವ, ದೇವರೊಂದಿಗೆ ನೇರವಾಗಿ ಸಂಬಂಧ ಕಲ್ಪಿಸುವ ಅಭ್ಯಾಸಗಳನ್ನು ಕೈಗೆತ್ತಿಕೊಂಡು, ನಾವು ಧ್ಯಾನದಿಂದಾಚೆ ಹೋಗೋಣ. ಆಗ ಮಾತ್ರ ಕ್ರಾಂತಿ ಯಶಸ್ವಿಯಾಗುತ್ತದೆ. ನಾವು ದೀಪದಂತಿರೋಣ. ಅದು ಏನನ್ನೂ ಘೋಷಿಸುವುದಿಲ್ಲ, ಕೇವಲ ಬೆಳಕನ್ನು ಕೊಡುತ್ತದೆ. ಜೀವನ ದೊಡ್ಡ ಆಯಾಮಗಳನ್ನು ಹೊಂದಿದೆ. ಆದರೆ ನಾವು ಧ್ಯಾನಿಗಳು, ನೇರವಾಗಿ ಋಷಿಗಳ ಮಾರ್ಗದರ್ಶನದಲ್ಲಿರುವವರು, ಬೆಳೆಯಬೇಕು.

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಧ್ಯಾನಗಳಿಂದ ಮುಂದೆ ಹೋಗಿ, ಸಮಾಧಿಯನ್ನು ಮೀರಿ, ಜ್ಞಾನೋದಯವನ್ನು ಕೂಡಾ ಮೀರಿ ಮುಂದೆ ಹೋಗಬೇಕು, ಏಕೆಂದರೆ ಸಾಧನೆಗೆ ಕೊನೆಯಿಲ್ಲ.

ಋಷಿಗಳು ಕೆಲವರನ್ನು ಆಯ್ಕೆಮಾಡಿದ್ದಾರೆ. ಅವರಿಗೆ ಸೂಕ್ಷ್ಮಮಟ್ಟದಲ್ಲಿ ತರಬೇತಿ ಕೊಡಲಾಗುತ್ತಿದೆ. ಆದರೆ ಅವರಿಗೆ ಇದು ತಿಳಿದಿಲ್ಲ. ನಿಮ್ಮನ್ನೂ ಕೂಡ ಈ ವಿಶೇಷ ತರಬೇತಿಗಾಗಿ ಋಷಿಗಳು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ, ನೀವು ಬೆಳೆಯಿರಿ ಮತ್ತು ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಿ.

**15–07–2012**

ಪ್ರತಿಯೊಂದು ಚೆಕಪ್ ಒಂದು ದೀಕ್ಷೆಯಂತೆ ಎಂಬುದನ್ನು ನೆನಪಿಡಿ. ನೀವು ಕ್ರಮಬದ್ಧವಾಗಿ ಧ್ಯಾನ ಮಾಡದಿದ್ದರೂ, ಚೆಕಪ್‌ಗೆ ಹಾಜರಾಗಿ. ನೀವೇ ನಿರ್ಧರಿಸಿಕೊಂಡು ಚೆಕಪ್ ತಪ್ಪಿಸಬೇಡಿ. ಇದರಿಂದ ನೀವು ಹೆಚ್ಚಿನದನ್ನು ಕಳೆದುಕೊಳ್ಳುವಿರಿ. 'ದೂರಕಲಿಕೆ ಧ್ಯಾನ' ತೆಗೆದುಕೊಂಡವರು ಸಕಾಲದಲ್ಲಿ ವರದಿಯನ್ನು ಕಳುಹಿಸದೇ ಹೋದರೆ, ವೆಬ್‌ಕಾಸ್ಟ್ ಸೌಲಭ್ಯ ಪಡೆಯುತ್ತಿದ್ದರೂ ಅವರನ್ನು ವಿದ್ಯಾರ್ಥಿಗಳೆಂದು ಪರಿಗಣಿಸುವುದಿಲ್ಲ. ಧ್ಯಾನ ಮಾಡಲು ನಿಮಗೆ ಕಷ್ಟವೆನಿಸಿದಾಗ, ಪಟ್ಟು ಹಿಡಿಯಿರಿ. ನಿಮ್ಮ ದೇಹ, ಮನಸ್ಸು ಮತ್ತು ಬುದ್ಧಿಗಳ ವ್ಯವಸ್ಥೆಯನ್ನು ಸಹಾಯಕ್ಕಾಗಿ ಪ್ರಾರ್ಥಿಸಿ, ಋಷಿಗಳನ್ನು ಕುರಿತು ಪ್ರಾರ್ಥಿಸಿ, ಅವರು ನಿಮಗೆ ಸಹಾಯ ಮಾಡುತ್ತಾರೆ. ಪ್ರಯತ್ನ ಬಿಡಬೇಡಿ, ಧ್ಯಾನ ಮಾಡುವುದನ್ನು ನಿಲ್ಲಿಸಬೇಡಿ.

ಒಬ್ಬ ವ್ಯಕ್ತಿ 20 ಪ್ರಶ್ನೆಗಳನ್ನು ಕೇಳಿದರು. ನಿಮಗೆ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂಬ ಆಸಕ್ತಿಯಿರುವುದು, ಒಳ್ಳೆಯದು. ಆದರೆ ಅದರಲ್ಲಿ ಎಷ್ಟನ್ನು ಪರಿಪಾಲಿಸುತ್ತಿದ್ದೀರಿ ಎಂಬುದನ್ನು ತಿಳಿಯಲು ನಾನು ಹೆಚ್ಚು ಅಪೇಕ್ಷೆಪಡುತ್ತೇನೆ ಮತ್ತು ಗಮನಿಸುತ್ತಿದ್ದೇನೆ. ಈ ಎಲ್ಲ ಉತ್ತರಗಳನ್ನು ಅರ್ಥಮಾಡಿಕೊಳ್ಳುವುದರಿಂದ ಎಷ್ಟರಮಟ್ಟಿಗೆ ಕೋಪ ಕಡಿಮೆಯಾಗಿದೆ ಎಂದು ತಿಳಿಯಬಯಸುತ್ತೇನೆ. ನಾನು ಗಮನಿಸಿದಾಗ, ಯಾವುದೇ ವ್ಯತ್ಯಾಸವನ್ನು ಕಾಣಲಿಲ್ಲ. ಜನರು ಕೇವಲ ಕುತೂಹಲಕ್ಕಾಗಿ ಅಥವಾ ಸುಮ್ಮನೆ ತಿಳಿಯುವುದಕ್ಕೆ ಪ್ರಶ್ನೆಗಳನ್ನು ಕೇಳುತ್ತಾರೆ. ನೀವು ಉತ್ತರಗಳನ್ನು ಆಲಿಸಿ ಸುಮ್ಮನೆ ಇದ್ದುಬಿಟ್ಟರೆ, ನಿಮಗೆ ಸಹಾಯವಾಗುವುದಿಲ್ಲ. ಪ್ರಶ್ನೆಗಳನ್ನು ಕೇಳುವುದಕ್ಕೆ ನಿಮ್ಮನ್ನು ನಿರುತ್ಸಾಹಗೊಳಿಸುತ್ತಿಲ್ಲ. ಪ್ರಶ್ನೆಗಳನ್ನು ಕೇಳಿ. ವಾಸ್ತವವಾಗಿ ಅದು ನನಗೆ ಸಹಾಯಮಾಡುತ್ತದೆ.

ಕೆಲವು ಸಲ ಜನರು, 'ನಾನು ಒಬ್ಬ ವ್ಯಕ್ತಿಗೆ ಬೆಳಕನ್ನು ಕಳುಹಿಸಬಹುದೆ?' ಎಂದು ಪ್ರಶ್ನಿಸುತ್ತಾರೆ. ಯಾವುದೇ ಸಮಸ್ಯೆ ಅಥವಾ ಗೊಂದಲದಲ್ಲಿ ಅಥವಾ ಕಷ್ಟದಲ್ಲಿರುವ ವ್ಯಕ್ತಿಗೆ ನೀವು ಬೆಳಕನ್ನು ಒಂದು ಬೆಳಕಿನ ಧಾರೆಯ ರೀತಿಯಲ್ಲಿ ಕಳುಹಿಸಬಹುದು. ಪ್ರವಾಹ ಪೀಡಿತ ಪ್ರದೇಶಗಳಿಗೆ, ಬರ ಅಥವಾ ಪ್ರಕೃತಿಯ ಯಾವುದೇ ಪ್ರಕೋಪಕ್ಕೆ ಒಳಗಾದ ಜನರ ನೋವಿಗೆ ನೀವು ಬೆಳಕನ್ನು ಕಳುಹಿಸಬಹುದು. ಇದನ್ನು ಕನಿಷ್ಠ 7 ನಿಮಿಷ ಅಭ್ಯಸಿಸಬೇಕು. ಯಾವುದೇ ಸದುದ್ದೇಶಕ್ಕೆ ನೀವು ಬೆಳಕನ್ನು ಕಳುಹಿಸಬಹುದು.

ನಾಚಿಕೆಗೇಡು ಮತ್ತು ಹಿಂಸಾತ್ಮಕ ಪ್ರಕ್ರಿಯೆಗಳು ನಮ್ಮ ಸುತ್ತಮುತ್ತ ಸಂಭವಿಸುತ್ತಿವೆ. ಅವುಗಳ ಬಗ್ಗೆ ಯೋಚಿಸಿದರೆ ನೀವು ತುಂಬಾ ವಿಚಲಿತರಾಗುವಿರಿ. ನಾವು ವಿಚಲಿತರಾಗಲೇಬೇಕು. ಇವೆಲ್ಲದರ ನಡುವೆಯೂ ನಾವು ಭರವಸೆಯನ್ನು ಹೊಂದಿರಬೇಕು, ಏಕೆಂದರೆ ಭವಿಷ್ಯತ್ತಿನ ಕಾಲಗಳು ಉಜ್ವಲವಾಗಿವೆ. ಅಧಿಕಾರದಲ್ಲಿರುವವರು, ಹಿಂಸೆ ಮತ್ತು ಅವಹೇಳನಕಾರಿ ಕೃತ್ಯಗಳನ್ನು ಮಾಡುವ ಜನರನ್ನು ದಂಡಿಸದೇ ಹೋದರೆ ಇಂಥ ಜನರನ್ನು ಉನ್ನತ ಬುದ್ಧಿಶಕ್ತಿಗಳು ವಿಚಾರಿಸಿಕೊಳ್ಳುತ್ತವೆ. ನಮ್ಮ ಪಾತ್ರವೆಂದರೆ ಹೆಚ್ಚು ಬೆಳಕನ್ನು ಚಾನಲ್ ಮಾಡುವುದು.

**22–07–2012**

ಋಷಿಗಳು ಉನ್ನತ ಅಥವಾ ವಿಶೇಷ ತರಬೇತಿಗಾಗಿ ಕೆಲವರನ್ನು ಆಯ್ಕೆ ಮಾಡಿರುವುದು ಜನರಿಗೆ ತಿಳಿದಿದೆ. ಸಹಜವಾಗಿ ಜನರು, “ನನ್ನನ್ನು ಆಯ್ಕೆ ಮಾಡಿದ್ದಾರೆಯೇ?” ಎಂದು ನನ್ನನ್ನು ಕೇಳುತ್ತಾರೆ. ನೀವು ಹಿಗ್ಗುವಿರಿ, ಆದ್ದರಿಂದ ಇದನ್ನು ನಾನು ನಿಮಗೆ ಹೇಳುವುದಿಲ್ಲ. ಎತ್ತರದಲ್ಲಿ ತೇಲುವುದು ತುಂಬ ಅಪಾಯಕರ. ನಾವು ಹೇಗೋ ಬೇಗನೆ ಕೆಳಗಿಳಿದು ಬಿಡುತ್ತೇವೆ. ಅವರು ಪ್ರಪಂಚದ ಎಲ್ಲ ಕಡೆಯಿಂದ ಮತ್ತು ಮಾನಸ ಗುಂಪಿನಿಂದ ಕೂಡಾ ಜನರನ್ನು ಆರಿಸಿದ್ದಾರೆ. ತಮ್ಮನ್ನು ಆರಿಸಿಲ್ಲ ಎಂದುಕೊಂಡಿರುವವರಿಗೆ ಇದೊಂದು ಭರವಸೆ – ನಮ್ಮನ್ನು ನೀವು ಬಿಟ್ಟುಹೋಗದ ಹೊರತು, ನಾವು ಯಾರನ್ನೂ ಕೈ ಬಿಡುವುದಿಲ್ಲ. ಸಮಯಬೇಕು ಅಷ್ಟೆ. ನಿಮ್ಮನ್ನು ನೀವು ಸಿದ್ಧಪಡಿಸಿಕೊಳ್ಳಿ. ಅಧ್ಯಾತ್ಮೀಕರಿಸಿಕೊಳ್ಳಿ. ಶಂಬಲದ ಯಾವುದಾದರೂ ಒಂದು ನಿಯಮವನ್ನು ನೀವು ಅಭ್ಯಾಸ ಮಾಡಿದರೆ, ನಿಮಗೆ ತಿಳಿಯದಂತೆ ತನ್ನಷ್ಟಕ್ಕೆ ತಾನೇ ಪ್ರಾಮಾಣಿಕತೆ, ಶಾಂತತೆ ಮತ್ತು ಒಳ್ಳೆಯತನದಂಥ ಬೇರೆಲ್ಲವನ್ನೂ ಅಭ್ಯಾಸ ಮಾಡುವಿರಿ ಎಂದು ಅಮರರವರು ಹೇಳಿದ್ದಾರೆ. ನೀವು ಸಿದ್ಧರಾದ ಮೇಲೆ ನಿಮ್ಮನ್ನು ಋಷಿಗಳು ತೆಗೆದುಕೊಳ್ಳುತ್ತಾರೆ.

ಕೆಲವರು ಜನಿಸುವ ಮೊದಲೇ ತಮ್ಮ ಜೀವನದ ಗುರಿಯನ್ನು ಆರಿಸಿಕೊಳ್ಳುತ್ತಾರೆ. ಕೆಲವರು ನಂತರ ಆರಿಸಿಕೊಳ್ಳುತ್ತಾರೆ. ಡಿಸೆಂಬರ್ 2012ರ ಕಾಲಾವಧಿಯಲ್ಲಿ ಜೀವನ ಪಥಗಳನ್ನು ಬದಲಿಸಲು ಪ್ರಯತ್ನಿಸಬೇಡಿ, ಅದರಲ್ಲಿಯೂ ಲೌಕಿಕ ಜೀವನದ ಪಥವನ್ನು ಬದಲಿಸಬೇಡಿ. ಇದರಿಂದ ನೀವು ಹೆಚ್ಚಿನ ಸಮಯವನ್ನು ವ್ಯರ್ಥಗೊಳಿಸುವಿರಿ. ನಿಮ್ಮಲ್ಲಿ ಯಾರಿಗಾದರೂ ನಿರ್ವಹಿಸುವ ಶಕ್ತಿಯುಳ್ಳವರು ಪಥವನ್ನು ಬದಲಿಸಬಹುದು. ಈ ಸಮಯದಲ್ಲಿ ಮುಖ್ಯವಾದುದು ಏನೆಂದರೆ ಕೇವಲ ಸಿದ್ಧತೆ ಮಾಡಿಕೊಳ್ಳುವುದು, ಅಧ್ಯಾತ್ಮೀಕರಿಸಿಕೊಳ್ಳುವುದು. ನೀವು ಎಲ್ಲೇ ಇದ್ದರೂ ಈ ಅಂಶದೆಡೆಗೆ ಗಮನವಿಡಿ. ನೀವು ಋಷಿಗಳ ಕೆಲಸವನ್ನು ಮಾಡಲು ಬಯಸಿದರೆ ನಿಮಗೆ ಆ ಕೆಲಸ ಸಿಗುತ್ತದೆ. ಆದರೆ ಈಗ ನೀವು ಯಾವ ಪ್ರಮುಖ ಬದಲಾವಣೆಗಳನ್ನು ಮಾಡಬೇಡಿ ಅಥವಾ ಪ್ರಮುಖ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಡಿ. ನಿಮ್ಮ ಸಹಜ ಜೀವನವನ್ನು ಮುಂದುವರಿಸಿ.

ಪ್ರತಿಯೊಂದೂ ದೇವರ ಕಾಣಿಕೆ. ಇವುಗಳನ್ನು ಪಟ್ಟಿ ಮಾಡಲಸಾಧ್ಯ. ಇವುಗಳನ್ನು ಅರ್ಥಮಾಡಿಕೊಳ್ಳಲು ಕೆಲವು ಸೂಚನೆಗಳನ್ನು ಕೊಡುತ್ತೇನೆ. ನಾನು ಕಷ್ಟ ಕಾಲದಲ್ಲಿದ್ದಾಗ ಒಂದು ಸಲ ಅಮರರವರು ನನಗೆ ಹೇಳಿದ್ದರು: 'ಈ ದೇಹ ದೇವರು ಕೊಟ್ಟ ಉಡುಗೊರೆ.' ಹಾಗೆಯೇ ಆರೋಗ್ಯ ಕೂಡಾ ಒಂದು ಉಡುಗೊರೆ. ಪ್ರಕೃತಿ ಒಂದು ಉಡುಗೊರೆ. ಆಕಾಶ ಒಂದು ಉಡುಗೊರೆ. ಆಕಾಶವನ್ನು ವೀಕ್ಷಿಸಿ, ನೀವು ತಂತಾನೆ ವಿಸ್ತಾರಗೊಳ್ಳುವಿರಿ. ಒಂದು ಒಳ್ಳೆಯ ಸಂಬಂಧ ಕೂಡಾ ಉಡುಗೊರೆಯೇ. ನೀವು ಸಂಬಂಧ ಕಳೆದುಕೊಂಡಾಗ ಮಾತ್ರ ಅದರ ಬೆಲೆ ನಿಮಗೆ ತಿಳಿಯುತ್ತದೆ. ನಾವು ಅದನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ನಾವು ಸಾಮಾನ್ಯವಾಗಿ ಇದನ್ನು ಗೋಜಲು ಮಾಡಿಕೊಳ್ಳುತ್ತೇವೆ.

ಜ್ಞಾನ, ಚೈತನ್ಯಗಳು ಉಡುಗೊರೆಗಳು. ನನ್ನ ಗುರುವಿನಂತಹ ಗುರು ಒಂದು ಉಡುಗೊರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಕೊಡುಗೆಗಳೆಲ್ಲ ದೇವರ ಉಡುಗೊರೆಗಳು. ಈ ಉಡುಗೊರೆಗಳು, ನಾವು ಸುಖಪಡುತ್ತಿರುವ ಆಧುನಿಕ ವಸ್ತುಗಳು ದೇವರ ಉಡುಗೊರೆಗಳು. ಇವೆಲ್ಲಕ್ಕಿಂತ ಹೆಚ್ಚಾಗಿ ಬೆಳೆಯಲು ದೊರಕುವ ಅವಕಾಶಗಳೆಲ್ಲ ಉಡುಗೊರೆಗಳು. ಸಮಸ್ಯೆಗಳು ಕೂಡಾ ಉಡುಗೊರೆಗಳೇ. ಸಮಸ್ಯೆಯ ಫಲಿತಾಂಶ ಒಂದು ರೀತಿಯ ವಿವೇಕವನ್ನು ತರುತ್ತದೆ. ಅದರಿಂದ ನಾವು ಕಲಿಯುತ್ತೇವೆ ಮತ್ತು ನಮ್ಮ ಜೀವನದ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳುತ್ತೇವೆ.

ದೇವರಿಗೆ ನಮ್ಮ ದೌರ್ಬಲ್ಯ ತಿಳಿದಿದೆ. ನಾವು ಸೂಕ್ತ ರೀತಿಯಲ್ಲಿ ಇಚ್ಛಾಶಕ್ತಿಯನ್ನು ಬಳಸುತ್ತಿಲ್ಲವೆಂಬುದು ತಿಳಿದಿದೆ. ಆದ್ದರಿಂದ ಅವನಿಗೆ ಹೆಚ್ಚು ನಂಬಿಕೆ, ವಿಶ್ವಾಸವಿರುವ ಋಷಿಗಳನ್ನು ಕಳುಹಿಸುತ್ತಾನೆ. ಅವರು ಕೆಳಗಿಳಿದು ಬಂದು, ಜನ್ಮತಾಳಿ, ನಮ್ಮೊಡನೆ ವಾಸಿಸುತ್ತ ನಮ್ಮನ್ನು ಮಾರ್ಗದರ್ಶಿಸುತ್ತಾರೆ. ಅವರು, ದೇವರು ನಮಗೆ ನೀಡಿರುವ ಅಮೂಲ್ಯ ಕಾಣಿಕೆ. ನನ್ನ ಜೀವನದಲ್ಲಿ ನನ್ನ ಗುರು ಅತ್ಯುನ್ನತ ಕಾಣಿಕೆ. ಈ ಕಾಣಿಕೆಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು, ಅವನ್ನು ಅನುಭವಿಸಬೇಕೇ ಹೊರತು, ಕಗ್ಗಂಟಾಗಿಸಬಾರದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ‘ಬೆಳಕಿನಿಂದ ಕ್ರಾಂತಿ’ ಬ್ಲಾಗ್ ಓದುಗರ ಪ್ರತಿಕ್ರಿಯೆ

ಸಂ: ಜಯಂತ್ ದೇಶ್‌ಪಾಂಡೆ; ಅನು: ಸುಧಾಕರ್

ನಾವು ಬೆಳಕಾದಾಗ ನಮ್ಮ ಸಮಸ್ಯೆಗಳು ಅವಕಾಶಗಳಾಗಿ ಬದಲಾಗುತ್ತವೆ.

– ಜೇಮಿ ವೇಕಪ್, ಫೇಸ್‌ಬುಕ್‌ನಲ್ಲಿ

‘ಷರತ್ತುಗಳಿರದ ಪ್ರೀತಿ’ಯ ಬೆಳಕು, ಪ್ರೀತಿಯಿಲ್ಲದುದೆಲ್ಲವನ್ನೂ ಬದಲಾಯಿಸುತ್ತದೆ, ಪರಿಶುದ್ಧಗೊಳಿಸುತ್ತದ ಮತ್ತು ತೆಗೆದುಹಾಕುತ್ತದೆ. ಇದು ಒಂದು ದೊಡ್ಡ ಸಮಸ್ಯಾ–ನಿವಾರಕ.

– ಶರ್ಲಿನ್ ವುಡ್ ಸ್ಪಾಲ್ಡಿಂಗ್, ಫೇಸ್‌ಬುಕ್‌ನಲ್ಲಿ

ನಮ್ಮ ಆಯುಧಗಳು ಈ ಪ್ರಪಂಚದವಲ್ಲ, ಆದರೆ ಅವು ಪ್ರಬಲವಾದವುಗಳು.

– ನೋಯಲ್ ಗೋನ್ಸ್ವಾಲೆಜ್, ಫೇಸ್‌ಬುಕ್‌ನಲ್ಲಿ

ನಿಜವಾಗಿಯೂ ‘ಬೆಳಕು’ ಮತ್ತು ‘ಪ್ರೀತಿ’, ದೇವರನ್ನು ವಿವರಿಸಲು ಕೊಡಬಹುದಾದ ಪರ್ಯಾಯ ಪದಗಳು. ಆದ್ದರಿಂದ ಪ್ರೀತಿಯನ್ನು ಹರಡಿದವರು ಬೆಳಕನ್ನು ಹರಡುತ್ತಿರುತ್ತಾರೆ ಎಂಬುದು ನನ್ನ ಅನಿಸಿಕೆ. ನಮ್ಮ ನಿಜವಾದ ಸ್ಥಿತಿಯೆಂದರೆ ‘ಬೆಳಕು’ ಅಥವಾ ‘ಪರಿಶುದ್ಧ ಆತ್ಮ’, ಎಂದು ಕೇಳಿದ್ದೇನೆ.

– ಮೈಕೆಲ್ ಡೆನಿಸ್, ‘ಮಾರ್ನಿಂಗ್ ಕಾಫಿ ವಿತ್ ಗಾಡ್’ ಪುಸ್ತಕದ ಲೇಖಕ, ಲಿಂಕ್ಡಿನ್‌ನಲ್ಲಿ

ದೇವರು, ಪ್ರೀತಿ, ಬೆಳಕು, ಇವೆಲ್ಲವೂ ಒಂದೇ ಎನ್ನುವುದು ಕೆಲವರಿಗೆ ತಿಳಿದಿಲ್ಲ. ಪ್ರತಿಯೊಬ್ಬರೂ ದೇವರ ಸೃಷ್ಟಿ. ದೇವರು ಎಲ್ಲೆಡೆ ಇದ್ದಾನೆ ಮತ್ತು ನಾವೆಲ್ಲರೂ ನಮ್ಮ ಶಕ್ತ್ಯಾನುಸಾರ ಪ್ರೀತಿ ಮತ್ತು ಬೆಳಕಿನ ಕಂಪನಗಳನ್ನು ಹೊರಸೂಸುತ್ತೇವೆ. ಇದರ ಅರಿವಿಲ್ಲದವರು ದೇವರು ಹೊರಗಿದ್ದಾನೆ ಎಂಬ ಕಲ್ಪನೆಯಿಂದ, ‘ದೇವರಲ್ಲಿ ನನಗೆ ನಂಬಿಕೆಯಿಲ್ಲ’ ಎಂದು ಹೇಳುತ್ತಾರೆ.

– ಫ್ಯೆರೋ ಡೇನಿಯಲ್ಸ್, ಲಿಂಕ್ಡಿನ್‌ನಲ್ಲಿ

ದೇವರನ್ನು ನಂಬದೆಯೇ ಒಬ್ಬ ವ್ಯಕ್ತಿ ‘ಬೆಳಕು’ ಮತ್ತು ‘ಚೈತನ್ಯ’ಗಳನ್ನು ಚಾನಲ್ ಮಾಡಬಹುದೆಂಬುದು ಅದ್ಭುತವಾದ ಚರ್ಚೆ. ಚೈತನ್ಯ ಬ್ರಹ್ಮಾಂಡದಲ್ಲೆಲ್ಲ ಪ್ರವಹಿಸುತ್ತಿರುತ್ತದೆ ಹಾಗೂ ನಮ್ಮ ಅಂತರಂಗದ ಕೊಡುಗೆಯಾದ ಪ್ರೀತಿ ಮತ್ತು ಶುದ್ಧ ಇಂಗಿತದೊಂದಿಗೆ, ಈ ಚೈತನ್ಯವನ್ನು ಇತರರಿಗೆ ಚಾನಲ್ ಮಾಡಬಹುದು.

– ವಿಲಿಯಂ ಬೊರಸ್ಸ, ಲಿಂಕ್ಡಿನ್‌ನಲ್ಲಿ

ನೀವು ದೇವರನ್ನು ಪ್ರೀತಿಸದಿದ್ದರೆ ಜನರನ್ನು ಅಥವಾ ಪ್ರಪಂಚವನ್ನು ಪ್ರೀತಿಸಲಾರಿರಿ, ಏಕೆಂದರೆ ದೇವರೇ ಪ್ರೀತಿ. ನಿಮ್ಮನ್ನು ದೇವರು ಪ್ರೀತಿಸುತ್ತಾನೆಂಬುದನ್ನು ನಂಬಿದಾಗ, ನೀವು ಇತರರನ್ನು ಪ್ರೀತಿಸಲು ಪ್ರಾರಂಭಿಸುವಿರಿ ಮತ್ತು ಅವರನ್ನು ಮನಸಾರೆ ಬೆಳಕಿನಿಂದ ಬೆಳಗಿಸುವಿರಿ.

– ಅಬ್ದೋ ಸಲೆಮ್, ಲಿಂಕ್ಡಿನ್‌ನಲ್ಲಿ

ನಾನು ‘ಬ್ಲಾಗ್’ ಅನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ನಾನು ಬೆಳಕನ್ನು ಎಲ್ಲ ಸನ್ನಿವೇಶಗಳಲ್ಲಿ ಆಯ್ಕೆಮಾಡಿಕೊಂಡಿದ್ದರಿಂದ, ನನ್ನ ಜೀವನದ ಎಲ್ಲ ಸಮಸ್ಯೆಗಳೂ ಕಣ್ಮರೆಯಾಗಿವೆ, ಇದು ನನ್ನ ಅನುಭವ. ನಾವು ಅವಕಾಶ ಮಾಡಿಕೊಟ್ಟರೆ ಬೆಳಕು ನಮ್ಮ ಜೀವನದ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆ. ಇದು ಜೀವನವನ್ನು ಅನುಭವಿಸುವ ಅಮೋಘವಾದ ರೀತಿ.

– “Inspiration for the soul” ತಂಡದ ಹೇಳಿಕೆ

ಬೆಳಕಾಗುವುದರಿಂದ ಎಲ್ಲ ಸಮಸ್ಯೆಗಳೂ ಪರಿಹಾರವಾಗದಿರಬಹುದು. ಆದರೆ ಆ ಸಕಾರಾತ್ಮಕ ಮನೋಭಾವದಿಂದ ನಾವು ಶಕ್ತಿವಂತರಾಗಿ ಉಳಿಯಬಹುದು ಮತ್ತು ಸಮಸ್ಯೆಗಳನ್ನು ಎದುರಿಸುವ ಸ್ಥಿತಿಯಲ್ಲಿರಬಹುದು.

– ಜೇಮ್ಸ್ ರೋಜರ್ಸ್, ಫೇಸ್‌ಬುಕ್‌ನಲ್ಲಿ

ಇದು ಅತ್ಯುತ್ತಮವಾಗಿದೆ ಮತ್ತು ಜ್ಞಾನದಿಂದ ತುಂಬಿದೆ. ನಿಮ್ಮ ಎಲ್ಲ ಬ್ಲಾಗ್–ಪೋಸ್ಟ್‌ಗಳು ಅಮೂಲ್ಯವಾದವುಗಳು. ಅವುಗಳಿಂದ ನಾನು ಯಾವಾಗಲೂ ಸ್ಫೂರ್ತಿಗೊಳ್ಳುತ್ತೇನೆ ಮತ್ತು ಕಲಿಯುತ್ತೇನೆ.

– ರಾಶಿ ಬಿಂದಾಲ್, ಫೇಸ್‌ಬುಕ್‌ನಲ್ಲಿ

ಅತ್ಯದ್ಭುತ! ನಮ್ಮೊಡನೆ ಹಂಚಿಕೊಂಡದ್ದಕ್ಕಾಗಿ ಧನ್ಯವಾದಗಳು. ಬೆಳಕೇ ಸರಿಯಾದ ದಾರಿ ಎಂದು ನಾನೂ ನಂಬುತ್ತೇನೆ. ಅದು ನನಗೆ ಅನೇಕ ಸಲ ಸಹಾಯಮಾಡಿದೆ.

– ‘ನಿಮಗೆ ಬೇಕಾದುದನ್ನು ಸೃಷ್ಟಿಸಿ’ ಬಗೆಗಿನ ಪ್ರತಿಕ್ರಿಯೆ, ಫೇಸ್‌ಬುಕ್‌ನಲ್ಲಿ

ನಿಮ್ಮ ಸಂದೇಶಕ್ಕೆ ಪುರಾವೆಯನ್ನು ನಾನೇ ಕಂಡಿದ್ದೇನೆ. ಅತ್ಯಂತ ಜಟಿಲವಾದ ಸಂದರ್ಭಗಳಲ್ಲೂ, ಅದನ್ನು ನನಗೆ ಬೇಕಾದ ರೀತಿಯಲ್ಲಿ ಸರಿಪಡಿಸಲು ಬೆಳಕನ್ನು ಬಳಸಿಕೊಂಡಿದ್ದೇನೆ, ಮತ್ತು ಪ್ರತಿಬಾರಿಯೂ ನನ್ನ ನಿರೀಕ್ಷೆಗೆ ಮೀರಿದ ಫಲಿತಾಂಶಗಳು ಲಭಿಸಿವೆ.

– ಸಿಂಡಿ ಪುಂಟೆ, ಫೇಸ್‌ಬುಕ್‌ನಲ್ಲಿ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ಜೂನ್ 6ರಂದು ಸಂಭವಿಸಲಿರುವ ಶುಕ್ರ ಸಂಕ್ರಮಣವು ಯಾವುದಾದರೂ ಪರಿಣಾಮ ಬೀರುತ್ತದೆಯೇ?**

ಉ: ಹೌದು. ಅದು ಹೊಸ ಚೈತನ್ಯಗಳನ್ನು ಬಿಡುಗಡೆ ಮಾಡುತ್ತದೆ. ಶುಕ್ರ ಸಂಕ್ರಮಣವು ತುಂಬಾ ಸಕಾರಾತ್ಮಕ ಪರಿಣಾಮಗಳನ್ನು ಹೊಂದಿರುತ್ತದೆ. ಅದು ಸದ್ಯದಲ್ಲಿ ಯಾವುದೇ ಯುದ್ಧಗಳಿಲ್ಲದ ಮತ್ತು ಎಲ್ಲಾ ಸ್ತರಗಳಲ್ಲೂ ಹೆಚ್ಚು ಶಾಂತಿಯಿರುವ ಸೂಚನೆಯಾಗಿದೆ. ನಮ್ಮ ಬದುಕಿನ ದಾರಿ ಯಾವುದೇ ಇರಲಿ, ನಾವು ಹೇಗೋ ವಾಸ್ತವತೆಯನ್ನು ಒಪ್ಪಿ, ನೆಮ್ಮದಿಹೊಂದಿ, ಜೀವನದ ಗುರಿಯ ಬಗ್ಗೆ ಯೋಚಿಸಲು ಆರಂಭಿಸುತ್ತೇವೆ. ಅದು ನಮಗೆ ಅಧ್ಯಾತ್ಮದ ಉನ್ನತ ಮಟ್ಟವಾದ ಒಂದು ತೆರನಾದ ಸಮಚಿತ್ತತೆ, ಸಂಪೂರ್ಣತೆಯ ವಲಯಗಳನ್ನು ತಲುಪುವಲ್ಲಿ ಸಹಾಯ ಮಾಡುತ್ತದೆ. ಅದು ಪ್ರಪಂಚದ ಮುಖಂಡರು ಆತ್ಮಾವಲೋಕನ ಮಾಡಿಕೊಂಡು ಪ್ರಪಂಚದ ಒಳಿತಿಗಾಗಿ ಕೆಲಸಮಾಡುವಲ್ಲಿ ಸಹಾಯ ಮಾಡುತ್ತದೆ. ಹೆಚ್ಚು ಜಾಗೃತಿಗಳು, ಉನ್ನತ ಜಾಗೃತಿಗಳು ಉಂಟಾಗುತ್ತವೆ, ಮತ್ತು ಅದು 'ಬೆಳಕಿನ ಕ್ರಾಂತಿ'ಯ ಒಂದು ಭಾಗವಾಗಿದೆ.

**ಪ್ರ: ಅಂತಿಮ ಧಾರ್ಮಿಕ ವಿಧಿಗಳು ಮುಖ್ಯವೇ?**

ಉ: ವ್ಯಕ್ತಿಯ ಸಾವಿನ ಬಳಿಕ ಅವನ ಆತ್ಮವು ಮನೆಯವರ ಜೊತೆಯಲ್ಲಿ 10 ದಿನಗಳವರೆಗೆ ಇರುತ್ತದೆ. ಅಂತಿಮ ಧಾರ್ಮಿಕ ವಿಧಿಗಳ ಉದ್ದೇಶ ಆ ಆತ್ಮಕ್ಕೆ ಅದು ದೇಹದಲ್ಲಿ ಇಲ್ಲ ಎಂದು ನೆನಪಿಸುವುದು ಮತ್ತು ಮುಂದಿನ ಪಯಣಕ್ಕೆ ತಯಾರಿ ಮಾಡುವುದಷ್ಟೇ ಆಗಿದೆ. ಸೂಕ್ಷ್ಮಮಟ್ಟದ ಮಾರ್ಗದರ್ಶಿಗಳು ಕೂಡಾ ಅದಕ್ಕೆ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಸಮಾಜದ ಕೆಲವೇ ವರ್ಗಗಳ ಜನರು ಅದನ್ನು ಮಾಡುತ್ತಾರೆ, ಎಲ್ಲರೂ ಅಲ್ಲ. ಅಂತಹ ಸಂದರ್ಭಗಳಲ್ಲಿ ಮಾರ್ಗದರ್ಶಿಗಳು ಆತ್ಮಕ್ಕೆ ಜ್ಞಾನ ನೀಡುತ್ತಾರೆ.

**ಪ್ರ: ಸತ್ಯಯುಗದಲ್ಲಿ ಕಾಲ ಮತ್ತು ಜೀವಿತಾವಧಿ ವಿಸ್ತರಿಸುತ್ತದೆಯೇ?**

ಉ: ಇಲ್ಲ. ಸತ್ಯಯುಗದಲ್ಲಿ, ಕಾಲವು ಎಂದಿನಂತೆಯೇ ನಡೆಯುತ್ತದೆ ಮತ್ತು ಜೀವಿತಾವಧಿ ವಿಸ್ತರಿತವಾಗುವುದಿಲ್ಲ. ಆದರೆ ಜನರು ಹೆಚ್ಚು ಕಾಲ ಬದುಕುತ್ತಾರೆ. ಮೊದಲು ಅದು ಕಡಿಮೆ ಅವಧಿಯಾಗಿರಬಹುದು. ನಂತರ, ಜನರು ಸಾವಿರಾರು ವರ್ಷಗಳವರೆಗೆ ಬದುಕುತ್ತಾರೆ. ಜನರು ಸತ್ಯಯುಗದ ಸಂಪೂರ್ಣ 20,000 ವರ್ಷಗಳೂ ಬದುಕುತ್ತಾರೆ.

**ಪ್ರ: ನಾವು ಹೊಸಯುಗದೆಡೆ ಮುಂದುವರಿ-ದಂತೆಲ್ಲಾ ನಮ್ಮ ಸಹಜ ಶಕ್ತಿಗಳು ಮತ್ತು ವಿವೇಕತೆ ಸಹಜವಾಗಿಯೇ ತೆರೆದುಕೊಳ್ಳುತ್ತವೆಯೇ ಅಥವಾ ನಾವು ಪ್ರಯತ್ನ ಮಾಡಬೇಕೇ?**

ಉ: ನಾವು ಮುಂದುವರೆದಂತೆ ಕೆಲವು ಸಹಜ ಶಕ್ತಿಗಳು ತಾವಾಗಿಯೇ ತೆರೆದುಕೊಳ್ಳುತ್ತವೆ, ಎಲ್ಲವೂ ಅಲ್ಲ. ಅದಕ್ಕೆ ನಾವು ಸತ್ಯಯುಗದ ಪ್ರಾರಂಭದಲ್ಲಿ ಪ್ರಯತ್ನವನ್ನು ಮಾಡಬೇಕಾಗುತ್ತದೆ. ನಾವು ಸತ್ಯಯುಗವನ್ನು ಪ್ರವೇಶಿಸುತ್ತಿದ್ದಂತೆ ನಮ್ಮ ಎಲ್ಲಾ ಸಹಜಶಕ್ತಿಗಳು ಮತ್ತು ವಿವೇಕಗಳು ತೆರೆಯುತ್ತವೆ ಮತ್ತು ಕಾರ್ಯನಿರತವಾಗುತ್ತವೆ.

**ಪ್ರ: ಇನ್ನು ಮುಂದೆ ನಾವು ನಮ್ಮ ಸೂಕ್ಷ್ಮ ಗ್ರಹಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕೇ ಅಥವಾ ಈ ಹಿಂದಿನಂತೆ ಸ್ಥೂಲ ಗ್ರಹಿಕೆಯನ್ನೇ ಅವಲಂಬಿಸಿರಬೇಕೇ?**

ಉ: ನಾವು ಸಂಪೂರ್ಣವಾಗಿ ಸತ್ಯಯುಗವನ್ನು ಪ್ರವೇಶಿಸಿಲ್ಲ. ನಮ್ಮ ಪರಿಶುದ್ಧತೆಯ ಮಟ್ಟ ಅಷ್ಟು ಉನ್ನತ ಅಥವಾ ನಿಷ್ಕಳಂಕವಾಗಿಲ್ಲ. ಅದು ನಾವು ವಿಷಯಗಳನ್ನು ಸೂಕ್ಷ್ಮವಾಗಿ ಗ್ರಹಿಸುವುದಿಲ್ಲವೆಂದಲ್ಲ. ಇವನ್ನು ಗಣನೆಗೆ ತೆಗೆದುಕೊಳ್ಳಿ ಮತ್ತು ಸ್ಥೂಲ ಗ್ರಹಿಕೆಯೊಂದಿಗೆ ಪರೀಕ್ಷಿಸಿಕೊಳ್ಳಿ. ನನ್ನೊಂದಿಗೆ ಕೂಡಾ ಪರೀಕ್ಷಿಸಿಕೊಳ್ಳಿ. ಇಲ್ಲಿ ಇನ್ನೊಂದು ಅಂಶವಿದೆ. ವಿಕೃತ ವಿಷಯಗಳನ್ನು ದುಷ್ಟಶಕ್ತಿಗಳು ನಮಗೆ ಗೊಂದಲವನ್ನು ಉಂಟುಮಾಡಲು ಮುಂದೊಡ್ಡುತ್ತವೆ. ಆದ್ದರಿಂದ ನೀವು ಜಾಗರೂಕರಾಗಿರಬೇಕು.

**ಪ್ರ: 2012ರ ಅಂತ್ಯಕ್ಕೆ ಮೊದಲು ಮತ್ತು 2012ರ ನಂತರದಲ್ಲಿ ನಮ್ಮ ಪಾತ್ರವೇನು?**


ಉ: ಸದ್ಯ ನಮ್ಮ ಪಾತ್ರ ಬೆಳೆಯುವುದು. ಹೆಚ್ಚಿನ ಪ್ರೀತಿ ಮತ್ತು ಜ್ಞಾನದಿಂದ ನಿಮ್ಮನ್ನು ಅಣಿಗೊಳ್ಳಿಸಿರಿ; ಬೆಳಕನ್ನು ಚಾನಲ್ ಮಾಡಿರಿ. ಬೇರೆಯವರೂ ಬೆಳಕನ್ನು ಚಾನಲ್ ಮಾಡಲು ನಾವು ಸಹಾಯ ಮಾಡುವುದು ಕೂಡ ನಮ್ಮ ಪಾತ್ರವಾಗಿದೆ. ಒತ್ತಾಯ ಅಥವಾ ಬಲವಂತ ಮಾಡದಿರಿ. ಅದನ್ನು ಸೌಮ್ಯವಾಗಿ, ನಿಶ್ಶಬ್ದವಾಗಿ ಮತ್ತು ವಿನಯವಾಗಿ ಮಾಡಿ. 2012ರ ನಂತರ ತುಂಬಾ ಕೆಲಸಗಳಿವೆ, ಅದು ಏನೆಂದು ನಾವಿನ್ನೂ ತಿಳಿದುಕೊಳ್ಳಬೇಕಿದೆ.

**ಪ್ರ: ಒಬ್ಬ ವ್ಯಕ್ತಿ ಪ್ರಾಪಂಚಿಕ ವಿಷಯಗಳಲ್ಲಿ ಮಗ್ನನಾಗಿದ್ದಾಗಲೂ, ಹಗಲಿನ ಆಸ್ಟ್ರಲ್ ತರಗತಿಗಳಲ್ಲಿ ಭಾಗವಹಿಸಲು ಸಾಧ್ಯವೇ ಮತ್ತು ಹಾಗಿದ್ದೂ ಅದರ ಬಗ್ಗೆ ಗೊತ್ತಿಲ್ಲದೆ ಇರಬಲ್ಲನೇ?**

ಉ: ಅದು ಸಾಧ್ಯವಿದೆ. ಸೂಕ್ಷ್ಮ ಮಟ್ಟದಲ್ಲಿನ ನಮ್ಮ ಚಟುವಟಿಕೆಗಳ ಬಗ್ಗೆ ನಮಗೆ ಗೊತ್ತಿಲ್ಲ. ನಾವು ತಿಳಿದುಕೊಳ್ಳಬೇಕಿಲ್ಲ. ನಿಮಗೆ ಗೊತ್ತಾದಲ್ಲಿ ಗೊಂದಲಗಳಾಗುತ್ತದೆ. ಈ ಬದುಕು ಅಲ್ಲಿನ ಬದುಕಿಗಿಂದ ಭಿನ್ನ. ನಮ್ಮೆಲ್ಲರನ್ನು ಪರಿವೀಕ್ಷಿಸುತ್ತಿರುವ ಋಷಿಗಳು, ನಮಗೆ ತಿಳಿಯಬೇಕೆಂದು ಅವರು ಬಯಸಿದ, ನಮ್ಮ ಆಸ್ಟ್ರಲ್ ಚಟುವಟಿಕೆಗಳ ಕೆಲವು ಮಾಹಿತಿಗಳನ್ನು ಬಿಡುಗಡೆ ಮಾಡುತ್ತಾರೆ. ಹೇಗೋ ನಾವು ಅದರ ಬಗ್ಗೆ ತಿಳಿದುಕೊಳ್ಳುತ್ತೇವೆ. ವಿಷನ್‌ನಲ್ಲಿ ಅಥವಾ ಕನಸಿನಲ್ಲಿ ಅಥವಾ ಒಂದು ಮಿಂಚಿನಂತೆ ಅದು ನಮಗೆ ಗೋಚರವಾಗುತ್ತದೆ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| 2012 - End or Beginning | 100/- |
| Preparing for 2012 | 100/- |
| Light Body & Other Realities | 75/- |
| Master-Pupil Talks | 60/- |
| iGuruji - Vol 1, 3 & 4 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol - 4 & 5 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8

## ಆಧ್ಯಾತ್ಮಿಕ ಅನುಭವಗಳು

ಸಂ : ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಧ್ಯಾನಮಾಡುವಾಗ ಇದ್ದಕ್ಕಿದ್ದಂತೆ ನನ್ನ ದೇಹವನ್ನು ತುಂಬಿದ ನೀಲಿಬಣ್ಣದ ಬೆಳಕನ್ನು ನಾನು ಅನುಭವಿಸಲಾರಂಭಿಸಿದೆ. ಅದು ನಾನು ವಿಶ್ವದ ಪ್ರೀತಿ, ಶಾಂತಿ ಹಾಗೂ ನಿಶ್ಚಲತೆಯನ್ನು ಅನುಭವಿಸುತ್ತಿದ್ದೇನೇನೋ ಎಂಬಂತಿತ್ತು. ಈ ಅನುಭವ 15–20 ನಿಮಿಷಗಳವರೆಗಿದ್ದು, ಅನಂತರ ನನ್ನಲ್ಲಿ ಸಂಪೂರ್ಣ ಶಾಂತತೆ ಮತ್ತು ಅತ್ಯಂತ ಶಕ್ತಿಯುತವಾದ ಚೈತನ್ಯದ ಅನುಭವವಾಯಿತು.

– ಸುನೀಲ್ ಭಾರದ್ವಾಜ್

27–7–12 ರಂದು ಶಂಬಲ ಧ್ಯಾನ ಮಾಡುವಾಗ, ಸುಂದರವಾದ ಏನೋ ಒಂದು ನನ್ನ ಎದೆಯ ಭಾಗದಿಂದ ನಿಧಾನವಾಗಿ ಮೇಲೇರಿತು. ಒಂದು ರೀತಿಯ ಸಮಾಧಾನದ ಅನುಭವವಾಗಿ, ನನ್ನ ಅರಿವಿನ ಮಟ್ಟ ಹೆಚ್ಚಿತು. ಧ್ಯಾನದ ನಂತರ, ನಾನು ಸ್ವಲ್ಪ ಸಮಯ ವಿಶ್ರಮಿಸುತ್ತಿದ್ದಾಗ, ನಾನು ಉನ್ನತ ಮಟ್ಟದ ಕಂಪನಗಳೊಂದಿಗೆ ಕಂಪಿಸುತ್ತಾ ಆಳವಾಗಿ ಹೋಗಿ ನನ್ನ ಅಂತರಂಗದ ಬಳಿ ತಲುಪಿದೆ! ಆ ಘಟ್ಟದಲ್ಲಿ ನನಗೆ ನನ್ನ ಅಂತರಂಗವನ್ನು ಪ್ರವೇಶಿಸುವುದಕ್ಕೆ ಒಂದು ಅವಕಾಶವಿತ್ತು. ನನಗೆ ಯಾವುದೇ ಭಯವಿರಲಿಲ್ಲ. ನಾನು ಋಷಿಗಳನ್ನು ಹಾಗೂ ಗುರೂಜಿಯವರನ್ನು ನೆನೆದು ನನ್ನನ್ನು ಅವರಿಗೆ ಸಮರ್ಪಿಸಿಕೊಂಡಾಕ್ಷಣ ನಾನು ನನ್ನ ಅಂತರಂಗದ ಒಳಗಿದ್ದೆ. ಅರ್ಧಗಂಟೆಯವರೆಗೆ ನನ್ನನ್ನು ಸಂಪೂರ್ಣವಾಗಿ ಆ ಬಲವಾದ ವಲಯ ಆವರಿಸಿಕೊಂಡಿತ್ತು.

– ವಿದ್ಯಾ ವಿಶ್ವಾಮಿತ್ರ

ನಾನು ಧ್ಯಾನ ಮಾಡುವಾಗ ನನ್ನ ಪ್ರಜ್ಞೆಯು ವಿಸ್ತಾರಗೊಂಡು ಬೆಳಕಿನೊಂದಿಗೆ ವಿಲೀನಗೊಳ್ಳುತ್ತೇನೆ ಮತ್ತು ಆಗ ನಾನು ಬೇರೊಂದು ಆಯಾಮಕ್ಕೆ ಹೋಗುತ್ತೇನೆ. ನಾನೀಗ ನಿರ್ಲಿಪ್ತಳಾಗಿದ್ದೇನೆ ಮತ್ತು ನನ್ನ ಜೀವನದ ಎಲ್ಲ ಘಟನೆಗಳನ್ನೂ ಸಾಕ್ಷೀಭಾವದಿಂದ ನೋಡಲು ಸಾಧ್ಯವಾಗಿದೆ.

– ಶುಭದಾ ಲಿಮಯೆ

ನನ್ನ ಧ್ಯಾನಕ್ಕೆ ಕುಳಿತ ಕೆಲಕ್ಷಣಗಳಲ್ಲೇ, ಆಳವಾದ ನಿಶ್ಚಲತೆಯನ್ನು ಅನುಭವಿಸುತ್ತೇನೆ, ಅದು ನಾನು ಧ್ಯಾನ ಮುಗಿಸುವವರೆಗೂ ಇರುತ್ತದೆ. ಇತ್ತೀಚಿನ ಗ್ರಹಣ–ಧ್ಯಾನದ ನಂತರ ಇದು ಹೆಚ್ಚು ಆಳವಾಗಿದೆ. ಕೆಲವು ಬಾರಿ ನಾನು ಧ್ಯಾನ ಮಾಡದಿದ್ದಾಗಲೂ, ನನ್ನೊಳಗಿನ ಯಾವುದೋ ಒಂದರೊಂದಿಗೆ ಸಂಪರ್ಕದಿಂದಿರುವಂತೆ, ಯಾವುದೋ ಒಂದು ಜಲಾಶಯದ ಪಕ್ಕದಲ್ಲಿ ಇರುವಂತೆನಿಸುತ್ತದೆ. ಅದರಲ್ಲಿ ನಿಧಾನವಾಗಿ ಮುಳುಗಿ, ಅಪಾರವಾದ ಶಾಂತಿ ಮತ್ತು ಸಮಾಧಾನಗಳನ್ನು ಅನುಭವಿಸುತ್ತೇನೆ. ನಾನು ಯಾವಾಗ ಬೇಕಾದರೂ ಈ ಸ್ಥಳಕ್ಕೆ ಹೋಗಿ ಬರಬಹುದು. ಅದು ಬಹಳ ಉಪಶಮನಕಾರಿಯಾಗಿದೆ.

– ಗೀತಾ ಜೋಷಿ

ನನ್ನ ತಂದೆ ಅಭ್ಯಾಸ ವರದಿಯನ್ನು ಕಷ್ಟಪಟ್ಟು ಟೈಪ್‌ಮಾಡಿ, ಅದನ್ನು ಕಳುಹಿಸಲು ಪ್ರಯತ್ನಿಸುತ್ತಿದ್ದರು ಆದರೆ ಕಂಪ್ಯೂಟರ್‌ನಲ್ಲಿ ಏನೋ ತೊಡಕಾಗಿ, ಅವರಿಗೆ ಬರೆದುದನ್ನು ಉಳಿಸಿಕೊಳ್ಳಲಾಗಲೀ ಕಳುಹಿಸಲಾಗಲೀ ಆಗಲಿಲ್ಲ. ದುಗುಡದಿಂದ ನನಗೆ ಫೋನ್ ಮಾಡಿದರು. ಅವರನ್ನು ಸಮಾಧಾನವಾಗಿರಿಸಲು ಪ್ರಯತ್ನಿಸಿ, ತಕ್ಷಣವೇ ಸಹಾಯಕ್ಕಾಗಿ ಗುರೂಜಿಯವರನ್ನು ಮತ್ತು ಋಷಿಗಳನ್ನು ಪ್ರಾರ್ಥಿಸಿದೆ. ನಂತರ ಶಾಲೆಗೆ ಹೋಗುವ ನನ್ನ ಮಗ ಫೋನ್‌ನಲ್ಲಿ ವಿಚಿತ್ರವಾದ ಸೂಚನೆಗಳನ್ನು ನನ್ನ ತಂದೆಯವರಿಗೆ ಕೊಡುತ್ತಿರುವುದನ್ನು ಕಂಡೆ ಮತ್ತು ಎರಡೇ ನಿಮಿಷದಲ್ಲಿ ಕಂಪ್ಯೂಟರ್ ಸರಿಹೋಗಿ, ಮೇಲ್ ಕಳುಹಿಸಲು ಆಯಿತು. ಋಷಿಗಳು ಮತ್ತು ಗುರೂಜಿಯವರ ದಯಾಪರತೆಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

– ನಂದಿತ ವಿಜಯನ್

ಗುರೂಜಿಯವರ ಪುಸ್ತಕಗಳನ್ನು ಓದುವಾಗ ನನ್ನಲ್ಲಿ ಆಳವಾದ ಶಾಂತತೆ ಉಂಟಾಗುತ್ತದೆ. ನಾನು ಧ್ಯಾನ ಮಾಡಿದಾಗೆಲ್ಲ ನಿಶ್ಚಲತೆಯನ್ನು ಅನುಭವಿಸುತ್ತೇನೆ. ಆದರೆ ಇದು ನಾನು ಜಿಮ್‌ನಲ್ಲಿ ಗ್ರೂಪ್–ಸ್ಪಿನ್ನಿಂಗ್ ಮಾಡುವಾಗಲೂ ಉಂಟಾಗುತ್ತದೆ; ಇದು ನನಗೆ ಅಚ್ಚರಿ ತಂದಿದೆ. ನಾನು ಡ್ರೈವ್ ಮಾಡುವಾಗ ಕೂಡ ನನ್ನಲ್ಲಿ ತುಂಬ ಶಾಂತತೆ ತುಂಬಿರುತ್ತದೆ, ಕೆಲವು ಸಾರಿ ನಾನೆಷ್ಟು ಶಾಂತವಾಗಿರುತ್ತೇನೆಂದರೆ, ನಾನು ಆಟೋಪೈಲಟ್‌ನಲ್ಲಿದ್ದೇನೆ ಯಾರೋ ಡ್ರೈವ್ ಮಾಡುತ್ತಿದ್ದಾರೆ ಎಂದೆನಿಸುತ್ತಿರುತ್ತದೆ! ಇದಕ್ಕಾಗಿ ಗುರೂಜಿಯವರು ಮತ್ತು ಋಷಿಗಳಿಗೆ ಧನ್ಯವಾದಗಳು.

– ಸ್ವಪ್ನ ಟೆಂಬೆ

ನಾನು ಒಂದು ಸವಾಲಾಗಿರುವ ಯೋಜನೆಗಾಗಿ ಟ್ರೈನೀಗಳ ಒಂದು ಗುಂಪಿಗೆ ಸಲಹೆಗಾರನಾಗಿದ್ದೆ. ಸಮಯ ಕಡಿಮೆಯಿದ್ದು ಯೋಜನೆ ತುಂಬ ಕ್ಲಿಷ್ಟತೆಯಿಂದ ಕೂಡಿತ್ತು. ನಾನು ಬೆಳಕನ್ನು ನಮ್ಮೆಲ್ಲರಿಗೂ ಸಹಾಯ ಮಾಡುವಂತೆ ಪ್ರಾರ್ಥಿಸಿದೆ. ಯೋಜನೆ ಪೂರ್ಣವಾಗುವ ಎರಡು ದಿನಗಳ ಮೊದಲೂ ಅನೇಕ ದೋಷಗಳಿದ್ದವು. ಆದರೆ ಅದನ್ನು ಒಪ್ಪಿಸುವ ದಿನ ಎಲ್ಲವೂ ಸರಿಯಾಯಿತು. ಆಗ ನಾನು ಬೆಳಕನ್ನು ಪ್ರಾರ್ಥಿಸಿದ್ದರ ನೆನಪಾಗಿ, ಬೆಳಕು ಎಂದೂ ಸೋಲುವುದಿಲ್ಲ ಎಂಬುದು ಪುನಃ ದೃಢಪಟ್ಟಿತು.

– ಆಕಾಶ್ ಮಲ್ಲಿಕ್

ಜೂನ್ 22ರಂದು ನಾನು ಧ್ಯಾನದಲ್ಲಿ ಅತ್ಯಂತ ಆಳಕ್ಕೆ ಹೋದಾಗ, ಮಂತ್ರದ ಉಚ್ಚಾರಣೆ ಸಂಪೂರ್ಣವಾಗಿ ನಿಂತುಹೋಗಿತ್ತು. ಆ ಸಮಯದಲ್ಲಿ ಬಿಳಿಯ ವಸ್ತ್ರ ಧರಿಸಿದ್ದ ಒಬ್ಬ ವಯಸ್ಸಾದ ವ್ಯಕ್ತಿ ನನ್ನ ಬಳಿ ಬಂದು, ಹಣೆ ಮುಟ್ಟಿ ಆಶೀರ್ವದಿಸಿದರು. ನನಗೆ ಅವರ ಸ್ಪರ್ಶದ ಅನುಭವವಾಯಿತು. ತಕ್ಷಣ ನನಗೆ ಎಚ್ಚರವಾಗಿ ನಾನು ಧ್ಯಾನ ಮಾಡುವುದನ್ನು ನಿಲ್ಲಿಸಿದೆ.

– ಸ್ವಾಮಿನಾಥನ್ ಸಿ.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ